# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY



ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038








ಸಂಪುಟ:02 • ಸಂಚಿಕೆ: 55 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 23.08.2024 • ಶುಕ್ರವಾರ • ಪುಟ:04 • ಬೆಲೆ:2

Volume:02 • Issue: 55 • PRGI No:KARKAN/2023/88055 • VIJAYANAGARA • 23.08.2024 • Friday • Page:04 • Rs:2







## ಮಳೆಗೆ ಹಾನಿಯಾದ ಮನೆಗಳಿಗೆ ಪರಿಹಾರ

### ಡಿಸಿ ಎಂ.ಎಸ್.ದಿವಾಕರ ಹೇಳಿಕೆ | 230 ಮನೆಗೆ ಹಾನಿ | ಅತೀ ಹೆಚ್ಚು ಮಳೆ | ಮುಂದುವರೆದ ಸಮೀಕ್ಷೆ ಕಾರ್ಯ

### 309.35 ಹೆಕ್ಟೇರ್ ಕೃಷಿ ಬೆಳೆ ಹಾನಿ | 90.93 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿ | ಶೇ.100ರಷ್ಟು ಬಿತ್ತನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಮಳೆಯಿಂದಾಗಿ ಹಾನಿಯಾದ 230 ಮನೆಗಳ ಪೈಕಿ 126 ಮನೆಗಳಿಗೆ ನಿಯಮಾನುಸಾರ ಸಮೀಕ್ಷೆ ಕೈಗೊಂಡು ಪರಿಹಾರ ಧನ ಪಾವತಿಸಲಾಗಿರುತ್ತದೆ. ಇನ್ನು 104 ಮನೆಗಳು ಕಳೆದ 4 ದಿನಗಳಲ್ಲಿ ಹಾನಿಯಾಗಿದ್ದು, ಶೀಘ್ರದಲ್ಲಿ ಸಮೀಕ್ಷೆಯನ್ನು ಪೂರ್ಣಗೊಳಿಸಿ ನಿಯಮಾನುಸಾರ ಪರಿಹಾರ ವನ್ನು ಪಾವತಿಸಲಾಗುವುದು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.



ಜಿಲ್ಲೆಯಲ್ಲಿ ಮಳೆಯಿಂದಾಗಿ ಜೂನ್ ಒಂದನೇ ತಾರೀಖಿನಿಂದ ಇಂದಿನವರೆಗೂ ತಾಲ್ಲೂಕುವಾರು ಹೊಸಪೇಟೆ ತಾಲೂಕಿನಲ್ಲಿ 24, ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 26, ಕೂಡ್ಲಿಗಿ ತಾಲೂಕಿನಲ್ಲಿ 81, ಹರಪನಹಳ್ಳಿ ತಾಲೂಕಿನಲ್ಲಿ 32, ಹಡಗಲಿ ತಾಲೂಕಿನಲ್ಲಿ 30 ಮತ್ತು ಕೊಟ್ಟೂರು ತಾಲೂಕಿನಲ್ಲಿ 37 ಸೇರಿ ಒಟ್ಟು 230 ಮನೆಗಳಿಗೆ ಹಾನಿಯಾಗಿದೆ.

ಹರಪನಹಳ್ಳಿ ತಾಲ್ಲೂಕು, ಕೂಡ್ಲಿಗಿ ತಾಲೂಕು ಮತ್ತು ಹಡಗಲಿ ತಾಲ್ಲೂಕಿನಲ್ಲಿ ತಲಾ ಒಂದು ಸೇರಿ 3 ದೊಡ್ಡ ಜಾನುವಾರುಗಳ ಪ್ರಾಣಹಾನಿಯಾಗಿದೆ. ಈ ಮೂರೂ ಜಾನುವಾರುಗಳ ಮಾಲೀಕರಿಗೆ ನಿಯಮಾನುಸಾರ ಪರಿಹಾರವನ್ನು ಪಾವತಿ ಸಲಾಗಿರುತ್ತದೆ. ಬೆಳೆಹಾನಿಯಾದ ರೈತರುಗಳಿಗೆ ಸಮೀಕ್ಷೆ ಕೈಗೊಂಡು ಶೀಘ್ರದಲ್ಲಿ ಪರಿಹಾರವನ್ನು ಪಾವತಿಸಲಾಗುವುದು. ರೈತರು ಆತಂಕಪಡುವ ಅಗತ್ಯ ವಿರುವುದಿಲ್ಲವೆಂದು ಸಾರ್ವಜನಿಕರಲ್ಲಿ ತಿಳಿಯಪಡಿಸಲಾಗಿದೆ.

### ಬೆಳೆಹಾನಿ ಪರಿಹಾರ ಪಾವತಿಗೆ ಕಮವಹಿಸಲು ಡಿಸಿ ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ನೈಸರ್ಗಿಕ ವಿಕೋಪಗಳಿಂದ ಸ್ಥಳೀಯವಾಗಿ ಉಂಟಾಗುವ ಬೆಳೆ ಹಾನಿ ಪ್ರಕರಣಗಳಲ್ಲಿ ನಿಯಮಾನುಸಾರ ಪರಿಹಾರವನ್ನು ಜಿಲ್ಲಾಧಿಕಾರಿಗಳ ಹಂತದಲ್ಲಿ ನಿಯಮಾನುಸಾರ ಪಾವತಿಸಲು ಕಾರ್ಯವಿಧಾನ ಹಾಗೂ ಷರತ್ತು ನಿಬಂಧನೆಗಳನ್ನು ನಿಗದಿಪಡಿಸಲು ರಾಜ್ಯ ಸರ್ಕಾರವು ನಿರ್ಧರಿಸಿ ಆದೇಶಿಸಿರುವುದನ್ನು ಸರಿಯಾಗಿ ಪಾಲನೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

2024–25 ನೇ ಸಾಲಿನಲ್ಲಿ ನೈಸರ್ಗಿಕ ವಿಕೋಪಗಳಿಂದ ಸ್ಥಳೀಯವಾಗಿ ಉಂಟಾಗುವ ಬೆಳೆ ಹಾನಿಗೆ ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು 2023ರ ಜುಲೈ 11ರಂದು ಹೊರಡಿಸಿರುವ ಮಾರ್ಗಸೂಚಿಗಳನ್ವಯ ನಿಯಮಾನುಸಾರ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಪಾವತಿಸಬುದಾದ ಪರಿಹಾರ ಮೊತ್ತವನ್ನು ಜಿಲ್ಲಾಧಿಕಾರಿಗಳ ಹಂತದಲ್ಲಿಯೇ ಪರಿಹಾರ ತಂತ್ರಾಂಶದ ಮೂಖಾಂತರ ಮಾತ್ರವೇ ನಿಯಮಾನುಸಾರ ಅರ್ಹ ರೈತ ಫಲಾನುಭವಿಗಳಿಗೆ ಅರ್ಹತೆ ಅನುಗುಣವಾಗಿ ಪಾವತಿಸಲು ತೀರ್ಮಾನಿಸಿ, ಅದರಂತೆ ಸ್ಥಳಿಯವಾಗಿ ಉಂಟಾಗುವ ಬೆಳೆ ಹಾನಿಗಳಿಗೆ ಪರಿಹಾರವನ್ನು ನಿಯಮಾನುಸಾರ ಪಾವತಿಸಲು ಕಾರ್ಯವಿಧಾನ ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ಸರ್ಕಾರವು ನಿಗಧಿಪಡಿಸಿದೆ.

ಸರ್ಕಾರವು 2024ರ ಆಗಸ್ಟ್ 16ರಂದು ಹೊರಡಿಸಿದ ಸುತ್ತೋಲೆಯಲ್ಲಿ ತಿಳಿಸಿದ ನಿಯಮಗಳಂತೆ ಅಗತ್ಯ ಕ್ರಮ ವಹಿಸಬೇಕು ಎಂದು ಹೊಸಪೇಟೆ ಮತ್ತು ಹರಪನಹಳ್ಳಿ ಸಹಾಯಕ ಆಯುಕ್ತರು, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ ಅಧಿಕಾರಿಗಳಿಗೆ ಮತ್ತು ವಿಜಯನಗರ ಜಿಲ್ಲೆಯ ಎಲ್ಲ ತಾಲೂಕಿನ ತಹಸೀಲ್ದಾರಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.

**ಅತೀ ಹೆಚ್ಚು ಮಳೆ:** 2024–25ನೇ ಸಾಲಿನಲ್ಲಿ ಮುಂಗಾರು ಮಳೆಯಿಂದಾಗಿ ಜೂನ್ 1ನೇ ತಾರೀಖಿನಿಂದ 22ನೇ ಆಗಸ್ಟ್‌ವರೆಗೂ 237 ಮಿ.ಮೀ ವಾಡಿಕೆ ಮಳೆ ಆಗಬೇಕಾಗಿದ್ದು, 354 ಮಿ.ಮೀ ಮಳೆ ಆಗಿರುತ್ತದೆ. ಶೇ.49ರಷ್ಟು ವಾಡಿಕೆಗಿಂತ ಹೆಚ್ಚಿನ ಮಳೆ ಆಗಿರುತ್ತದೆ. ಕೊಟ್ಟೂರು ಮತ್ತು ಕೂಡ್ಲಿಗಿ ತಾಲ್ಲೂಕುಗಳಲ್ಲಿ ಕ್ರಮವಾಗಿ 138 ಮತ್ತು 145 ಶೇಕಡಾ ಅತಿ ಹೆಚ್ಚು ಮಳೆ ಆಗಿದೆ.

**ಶೇ.100ರಷ್ಟು ಬಿತ್ತನೆ:** ಜಿಲ್ಲೆಯಲ್ಲಿ ಕೃಷಿ ಪ್ರದೇಶದಲ್ಲಿ ಶೇ.100 ರಷ್ಟು ಬಿತ್ತನೆಯಾಗಿದೆ. 2,94,000 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆಗಳನ್ನು ಬಿತ್ತನೆ ಮಾಡಲಾಗಿದೆ. ಪ್ರಮುಖ ಬೆಳೆಗಳು ಮುಸುಕಿನ ಜೋಳ, ಶೇಂಗಾ, ಭತ್ತ, ಜೋಳ, ಸಜ್ಜೆ, ತೊಗರಿ ಮತ್ತು ರಾಗಿ ಬೆಳೆಗಳು ಬಿತ್ತನೆಯಾಗಿದೆ. ಹಾಗೂ ತೋಟಗಾರಿಕಾ ಪ್ರದೇಶದಲ್ಲಿ 4795 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತದೆ. ಪ್ರಮುಖ ಬೆಳೆಗಳು ಮೆಣಸಿನಕಾಯಿ, ಟಮೊಟೋ, ಈರುಳ್ಳಿ, ಬದನೆ ಬೆಳೆಗಳು ಸಹ ಬಿತ್ತನೆಯಾಗಿರುತ್ತವೆ.

**ಕೃಷಿ ಬೆಳೆ ಹಾನಿ:** ಮಳೆಯಿಂದಾಗಿ 309.35 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ಹಾನಿಯಾಗಿದೆ. ಪ್ರಮುಖವಾಗಿ ಮುಸುಕಿನ ಜೋಳ 136.29 ಹೆಕ್ಟೇರ್, ಭತ್ತ 118.71 ಹೆಕ್ಟೇರ್, ಹತ್ತಿ 21.1 ಹೆಕ್ಟೇರ್, ಸೂರ್ಯಕಾಂತಿ 11.3 ಹೆಕ್ಟೇರ್, ಜೋಳ 8.14 ಹೆಕ್ಟೇರ್, ಸಜ್ಜೆ 6.88 ಹೆಕ್ಟೇರ್, ಕಬ್ಬು 2.23 ಹೆಕ್ಟೇರ್, ರಾಗಿ 3.2 ಹೆಕ್ಟೇರ್, ಶೇಂಗಾ 1.1 ಹೆಕ್ಟೇರ್ ಮತ್ತು ಹೆಸರು 0.4 ಹೆಕ್ಟೇರ್‌ನಷ್ಟು ಕೃಷಿ ಬೆಳೆಗಳಿಗೆ ಹಾನಿಯಾಗಿದೆ.

**ತೋಟಗಾರಿಕಾ ಬೆಳೆ ಹಾನಿ:** ತೋಟಗಾರಿಕಾ ಬೆಳೆಗಳಿಗೆ 90.93 ಹೆಕ್ಟೇರ್ ಪ್ರದೇಶದಲ್ಲಿ ಹಾನಿಯಾಗಿರುತ್ತವೆ. ಇವುಗಳ ಪೈಕಿ ಮೆಣಸಿನಕಾಯಿ 32.4 ಹೆಕ್ಟೇರ್, ಈರುಳ್ಳಿ 23.1 ಹೆಕ್ಟೇರ್, ಪಪ್ಪಾಯ 3.2 ಹೆಕ್ಟೇರ್, ಬಾಳೆ 5.8 ಹೆಕ್ಟೇರ್, ಟಮೊಟೋ 4.8 ಹೆಕ್ಟೇರ್, ಹಾಗಲಕಾಯಿ 5.8 ಹೆಕ್ಟೇರ್, ಕುಂಬಳ ಕಾಯಿ 1.8 ಹೆಕ್ಟೇರ್, ನುಗ್ಗೇ 5.2 ಹೆಕ್ಟೇರ್, ವಿಲ್ಲೇದೆಲೆ 2.73 ಹೆಕ್ಟೇರ್, ಗುಲಾಬಿ 3.5 ಹೆಕ್ಟೇರ್, ಸುಗಂಧರಾಜ 1.2 ಹೆಕ್ಟೇರ್, ಅಡಿಕೆ 0.8 ಹೆಕ್ಟೇರ್, ಹಿರೇಕಾಯಿ 0.8 ಹೆಕ್ಟೇರ್ ತೋಟಗಾರಿಕಾ ಬೆಳೆಗಳು ಹಾನಿಯಾಗಿರುತ್ತವೆ.

**ಜಂಟಿ ಸಮೀಕ್ಷೆ ಕಾರ್ಯ ಪ್ರಗತಿ:** ಪೂರ್ವ ಮುಂಗಾರಿನಲ್ಲಿ ಒಟ್ಟು 186.00 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯ ಜಂಟಿ ಸಮೀಕ್ಷೆ ಕಾರ್ಯವು ಪೂರ್ಣಗೊಂಡಿದ್ದು, ರೈತರ ದಾಖಲೆಗಳನ್ನು ಪರಿಹಾರ ತಂತ್ರಾಂಶದಲ್ಲಿ ಗಣಕೀಕರಣಗೊಳಿಸಲಾಗಿರುತ್ತದೆ. ಫಲಾನುಭವಿ ಗಳಿಗೆ ಸರ್ಕಾರದಿಂದ ಶೀಘ್ರದಲ್ಲಿ ಪರಿಹಾರ ಮೊತ್ತವನ್ನು ಜಮಾ ಮಾಡಲಾಗುವುದು. ಮುಂಗಾರು ಋತುವಿನಲ್ಲಿ ಆದ ಬೆಳೆಹಾನಿಗಳ ಜಂಟಿ ಸಮೀಕ್ಷೆ ಕಾರ್ಯವು ಪ್ರಗತಿಯಲ್ಲಿದ್ದು, ಹಾನಿಯಾದ ರೈತರ ಪಟ್ಟಿಯನ್ನು ತಯಾರಿಸಿ ಸರ್ಕಾರದಿಂದ ನೇರವಾಗಿ ರೈತರ ಖಾತೆಗಳಿಗೆ ಬೆಳೆ ಪರಿಹಾರ ಮೊತ್ತವನ್ನು ಮುಂದಿನ ದಿನಗಳಲ್ಲಿ ಜಮಾ ಮಾಡಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ಮೈಕ್ರೋ ನ್ಯೂಸ್

### ಅಂಗನವಾಡಿ ಕಾರ್ಯಕರ್ತೆ, ಸಹಾಯಕರ ಹುದ್ದೆಗಳಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಶಿಶು ಅಭಿವೃದ್ಧಿ ಯೋಜನೆಯಡಿ ಹೂವಿನ ಹಡಗಲಿ ವ್ಯಾಪ್ತಿಯಲ್ಲಿ ಖಾಲಿ ಇರುವ 12 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 44 ಸಹಾಯಕಿಯರ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಸೆಪ್ಟಂಬರ್ 12 ಕೊನೆಯ ದಿನವಾಗಿದೆ. ಅರ್ಹ ಮಹಿಳಾ ಹಾಗೂ ಲಿಂಗತ್ವ ಅಲ್ಪ ಸಂಖ್ಯಾತ ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಹೂವಿನಹಡಗಲಿಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯವನ್ನು ಸಂಪರ್ಕಿಸಬಹುದು ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.


### ತುಂಗಭದ್ರಾ ಡ್ಯಾಮ್ ವೀಕ್ಷಣೆಗೆ ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**

ತುಂಗಭದ್ರಾ ಆಣೆಕಟ್ಟು ಮತ್ತು ಅದರ ಉದ್ಯಾನಗಳಿಗೆ ಸಾರ್ವಜನಿಕರಿಗೆ ಮತ್ತು ಸಂದರ್ಶಕರ ಪ್ರವೇಶಕ್ಕೆ ಹೊರಡಿಸಿದ್ದ ನಿರ್ಬಂಧವನ್ನು ತುಂಗಭದ್ರ ಮಂಡಳಿಯು ತೆರವುಗೊಳಿಸಿ ಪ್ರವೇಶಕ್ಕೆ ಅವಕಾಶ ಕಲ್ಪಿಸಿದೆ.

ತುಂಗಭದ್ರ ಜಲಾಶಯದ 19ನೇ ಕ್ರಸ್ಟ್ ಗೇಟ್ ಮರುಸ್ಥಾಪಿಸಲು ಅನುಕೂಲವಾಗುವಂತೆ ಅಣೆಕಟ್ಟು ಸೈಟ್ ಮತ್ತು ಅದರ ಆವರಣಕ್ಕೆ ಸಾರ್ವಜನಿಕ ಪ್ರವೇಶವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿತ್ತು. ಮರುಸ್ಥಾಪನೆ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಕಾರಣ ತುಂಗಭದ್ರಾ ಅಣೆಕಟ್ಟು ಮತ್ತು ಅದರ ಉದ್ಯಾನಗಳಿಗೆ ಸಾರ್ವಜನಿಕರಿಗೆ ಮತ್ತು ಸಂದರ್ಶಕರಿಗೆ ಪ್ರವೇಶವನ್ನು ಅನುಮತಿಸಲಾಗುತ್ತದೆ ಎಂದು ತುಂಗಭದ್ರ ಜಲಾಶಯ ಮಂಡಳಿಯ ಕಾರ್ಯದರ್ಶಿಗಳು ಪ್ರಕಣೆಯಲ್ಲಿ ತಿಳಿಸಿದ್ದಾರೆ.

### ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಹೆಚ್ಚುವರಿ ಅನುದಾನ ಬಿಡುಗಡೆಗೆ ಸಿಎಂ ಸೂಚನೆ



■ **ಹಂಪಿ ಟೈಮ್ಸ್ ಬೆಂಗಳೂರು**

ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

> **ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಪೀಠದ ಪ್ರಸನ್ನಾನಂದ ಮಹಾಸ್ವಾಮಿಗಳು ಮತ್ತು ಸಚಿವ ಸತೀಶ್ ಜಾರಕಿಹೊಳಿ ನೇತೃತ್ವದ ನಿಯೋಗದ ಬೇಡಿಕೆಗೆ ಸಿಎಂ ಸ್ಪಂದನೆ**

ವಿಧಾನಸೌಧದಲ್ಲಿ ತಮ್ಮನ್ನು ಭೇಟಿ ಮಾಡಿದ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಪೀಠದ ಪ್ರಸನ್ನಾನಂದ ಮಹಾಸ್ವಾಮಿಗಳು ಮತ್ತು ಸಚಿವ ಸತೀಶ್ ಜಾರಕಿಹೊಳಿ ನೇತೃತ್ವದ ಶಾಸಕರ ಮತ್ತು ಸಮುದಾಯದ ಮುಖಂಡರ ನಿಯೋಗದ ಬೇಡಿಕೆಗೆ ಸಿಎಂ ಸ್ಪಂದಿಸಿ ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸಲು ಸ್ಥಳದಲ್ಲೇ ಅಧಿಕಾರಿಗಳಿಗೆ ಸೂಚನೆ ನೀಡಿದರು. ವಾಲ್ಮೀಕಿ ನಿಗಮಕ್ಕೆ ಈ ಹಿಂದೆ ನೀಡಲಾಗಿದ್ದ 84.63 ಕೋಟಿ ಅನುದಾನದಲ್ಲಿ 50 ಕೋಟಿ ಯನ್ನು ಎಸ್ ಐ ಟಿ ಅಧಿಕಾರಿಗಳು ಬ್ಯಾಂಕ್ ಖಾತೆಯಲ್ಲೇ ಫ್ರೀಜ್ ಮಾಡಿಟ್ಟಿದ್ದಾರೆ. >>4

## ಪಿಒಪಿ, ಬಣ್ಣಲೇಪಿತ ಗೌರಿಗಣೇಶ ವಿಗ್ರಹಗಳ ಉತ್ಪಾದನೆ, ಮಾರಾಟ, ವಿಸರ್ಜನೆಗೆ ನಿಷೇಧ

### ಬಣ್ಣರಹಿತ ಮಣ್ಣಿನ ನೈಸರ್ಗಿಕ ಮೂರ್ತಿಗಳೊಂದಿಗೆ ಹಬ್ಬ ಆಚರಿಸಿ: ಡಿಸಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಸ್ವರ್ಣಗೌರಿ ಹಾಗೂ ವರಸಿದ್ಧಿ ವಿನಾಯಕ ಚತುರ್ಥಿ ಹಬ್ಬದ ನಿಮಿತ್ತ ಸಾರ್ವಜನಿಕರು ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿ.ಒ.ಪಿ) ಮತ್ತು ಬಣ್ಣ ಲೇಪಿತವಾದ ವಿಗ್ರಹಗಳ ಉತ್ಪಾದನೆ, ಮಾರಾಟ ಮತ್ತು ಅವುಗಳನ್ನು ಪೂಜಿಸಿ ಯಾವುದೇ ಕೆರೆ ಮತ್ತು ಇತರೆ ಜಲ ಮೂಲಗಳಲ್ಲಿ ವಿಸರ್ಜಿಸುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಸಾರ್ವಜನಿಕರು ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿ.ಒ.ಪಿ) ಮತ್ತು ಬಣ್ಣದ ವಿಗ್ರಹಗಳನ್ನು ಸ್ಥಾಪಿಸಿ ಪೂಜಿಸಿದ ನಂತರ ಕೆರೆ, ಬಾವಿ ಹಾಗೂ ಇನ್ನಿತರೆ ನೈಸರ್ಗಿಕ ಜಲಮೂಲಗಳಿಗೆ ವಿಸರ್ಜಿಸುವುದು ಸಂಪ್ರದಾಯವಾಗಿದ್ದು ಇದರಿಂದಾಗಿ ನೈಸರ್ಗಿಕ ಜಲಮೂಲಗಳು ಮಲೀನಗೊಳ್ಳುತ್ತಿವೆ. ಹಾಗಾಗಿ ಅಂತಹ ವಿಗ್ರಹಗಳನ್ನು ತಯಾರಿಸಬಾರದೆಂದು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ನಿವಾರಣೆ ಮತ್ತು ನಿಯಂತ್ರಣ)



ಕಾಯ್ದೆ 1974ರ ಪ್ರಕಾರ ಕಲಂ 33(ಎ) ಅನ್ವಯ ರಾಜ್ಯದ ಯಾವುದೇ ಜಲ ಮೂಲಗಳಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ಬಣ್ಣ ಲೇಪಿತವಾದ ವಿಗ್ರಹಗಳನ್ನು ವಿಸರ್ಜಿಸುವುದನ್ನು ನಿಷೇಧಿಸಲಾಗಿದ್ದು, ಈ ಆದೇಶವನ್ನು ಉಲ್ಲಂಘಿಸಿದ್ದಲ್ಲಿ ಐ.ಪಿ.ಸಿ ಸೆಕ್ಷನ್ 1860ರ ಪ್ರಕಾರ ಕ್ರಮಕೈಗೊಳ್ಳಲಾಗುವುದು.

ಗೌರಿ ಗಣೇಶ ಹಬ್ಬದ ಸಂದರ್ಭದಲ್ಲಿ ಬಣ್ಣರಹಿತ ಮಣ್ಣಿನ ನೈಸರ್ಗಿಕ ಮೂರ್ತಿಗಳೊಂದಿಗೆ ಹಬ್ಬ ಆಚರಿಸಿ ತದನಂತರ ಮೂರ್ತಿಗಳನ್ನು ನಗರಸಭೆ ಅಥವಾ ಪುರಸಭೆಯಿಂದ ನಿಗದಿಪಡಿಸಿರುವ ಸ್ಥಳಗಳಲ್ಲಿ ಹಾಗೂ ಸಂಚಾರಿ ವಾಹನದಲ್ಲಿಯೇ ಮೂರ್ತಿಗಳನ್ನು ವಿಸರ್ಜಿಸಬೇಕು. ಮೂರ್ತಿಗಳನ್ನು ವಿಸರ್ಜಿಸುವ ಸಂದರ್ಭದಲ್ಲಿ ಹಸಿ ಕಸ (ಹೂ, ಹಣ್ಣು, ಬಾಳೆಕಂಬ, ಮಾವಿನ ತೋರಣ ಇತ್ಯಾದಿ ಅಲಂಕಾರಿಕ ವಸ್ತುಗಳು) ಪ್ರತ್ಯೇಕಿಸಿ ನಗರಸಭೆ ಅಥವಾ ಪುರಸಭೆಯ ಕಸ ಸಂಗ್ರಹಣ ವಾಹನಕ್ಕೆ ನೀಡಬೇಕು. ಈಗಾಗಲೇ ಏಕ ಬಳಕೆ ಪ್ಲಾಸ್ಟಿಕ್ ಉತ್ಪಾದನೆ, ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಿದ್ದು ಅದರಂತೆ ಗೌರಿ ಗಣೇಶ ಹಬ್ಬದ ಆಚರಣೆ ಸಂದರ್ಭದಲ್ಲಿ ನಿಷೇಧಿತ ಏಕ ಬಳಕೆಯ ಪ್ಲಾಸ್ಟಿಕ್‌ಗಳನ್ನು ಸಾರ್ವಜನಿಕರು ಬಳಸದಂತೆ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

## ಶ್ರೀರಾಘವೇಂದ್ರ ಗುರುಸಾರ್ವಭೌಮರ ಉತ್ತರಾಧನೆ ಸಂಪನ್ನ



■ **ಹಂಪಿ ಟೈಮ್ಸ್ ಹೊಸಪೇಟೆ**

ನಗರ ಸೇರಿದಂತೆ ಜಿಲ್ಲಾದ್ಯಂತ ಮಂತ್ರಾಲಯ ಶ್ರೀರಾಘವೇಂದ್ರ ಸ್ವಾಮಿಗಳ 353 ನೇ ಉತ್ತರಾಧನೆ ನಿಮಿತ್ತ ಮಹಾರಥೋತ್ಸವ ಜರುಗಿತು.

ಶ್ರೀರಾಘವೇಂದ್ರ ಸ್ವಾಮಿಗಳ ನಗರದ ಶಾಖಾ ಮಠಗಳಲ್ಲಿ ಬೆಳಿಗ್ಗೆ ವಿಶೇಷವಾಗಿ ರಾಯರ ಬೃಂದಾವನಗಳಿಗೆ ಅಲಂಕಾರ ಮಾಡಲಾಗಿತ್ತು. ಉತ್ಸವ ಮೂರ್ತಿಗೆ ಕನಕಾಭಿಷೇಕ, ಸರ್ವಸೇವೆ, ಮಹಾಪೂಜೆ ಬಳಿಕ ಹಸ್ತೋದಕ, ನೇವೈದ್ಯ, ಮಹಾಮಂಗಳರಾತಿ ಜರುಗಿತು. ಉತ್ತರಾಧನೆ ಪ್ರಯುಕ್ತ ಮಹಾರಥೋತ್ಸವ ನಡೆಯಿತು. ವಿವಿಧ ಮಹಿಳಾ ಭಜನಾ ಮಂಡಳಿಗಳ ಸದಸ್ಯರು ನೃತ್ಯ ಗೀತೆಗಳೊಂದಿಗೆ ವಿಶೇಷ ಭಕ್ತಿ ಅರ್ಪಿಸಿದರು. ಬಳಿಕ ಅಲಂಕಾರ ಬ್ರಾಹ್ಮಣರ ಸಂತರ್ಪಣೆ ಹಾಗೂ ಬಂದ ಭಕ್ತರಿಗೆ ಅನ್ನದಾನ ಜರುಗಿತು. ಶ್ರೀಮಠದ ಆವರಣದಲ್ಲಿ ಸಾಮೂಹಿಕ ಭಜನೆ, ಅಷ್ಟೋತ್ತರ ಪಾರಾಯಣ, ಕೋಲಾಟ, ನೃತ್ಯ ಪ್ರದರ್ಶನ ನಡೆಯಿತು. ಶ್ರೀಮಠದ ವಿಭಾಗೀಯ ವ್ಯವಸ್ಥಾಪಕ ಗುರುರಾಜ್ ದಿಗ್ಗಾವಿ, ಶಾಖಾ ವ್ಯವಸ್ಥಾಪಕರಾದ ಕೃಷ್ಣಮೂರ್ತಿ, ಟೀಕಾಚಾರ್ಯ ಗುಂಜಳ್ಳಿ, ಅನಂತ ಪದ್ಮನಾಭ, ವಿಜಯ್ ಕುಮಾರ್, ಶಿರೆಕೊಳ್ಳ ಗುರುರಾಜ್, ಭೀಮಸೇನಾಚಾರ್, ಪವಾನಾರ್ಚ, ಪ್ರಹ್ಲಾದಾಚಾರ್ಯ, ಇತರರಿದ್ದರು.

## ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ 10 ಸಾವಿರ ಮೀಟರ್ ಓಟದಲ್ಲಿ ಪ್ರಥಮ ಶಿಕ್ಷಕ ನಾಗರಾಜ್ ರಾಷ್ಟ್ರಮಟ್ಟಕ್ಕೆ ಆಯ್ಕೆ




■ **ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ತಾಲೂಕಿನ ಉಜ್ಜಯಿನಿ ಗ್ರಾಮದ ಶಿಕ್ಷಕ ನಿಲುವಂಜಿ ನಾಗರಾಜ್ ರಾಜ್ಯ ಮಟ್ಟದ ಓಟದ ಸ್ಪರ್ಧೆಯಲ್ಲಿ ತನ್ನ ವೇಗದ ಓಟದಲ್ಲಿ ಜಯಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿ ಗ್ರಾಮದ ಕೀರ್ತಿ ಹೆಚ್ಚಿಸಿದ್ದಾರೆ.

ರಾಜ್ಯ ಸರ್ಕಾರಿ ನೌಕರರ ಸಂಘ , ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಕ್ರೀಡಾ ಕೂಟದ ಓಟದ ಸ್ಪರ್ಧೆಯಲ್ಲಿ ಶಿಕ್ಷಕ ನಾಗರಾಜ್ ಉತ್ತಮ ಪ್ರದರ್ಶನ ತೋರಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಶಿಕ್ಷಕ ನಾಗರಾಜ್ 5 ಸಾವಿರ ಮೀಟರ್ ಓಟದಲ್ಲಿ ದ್ವೀತಿಯ, 10 ಸಾವಿರ ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಪಡೆದು ಉತ್ತಮ ಸಾಧನೆ ತೋರಿದ್ದಾರೆ, ಇವರ ಸಾಧನೆಗೆ ಶಿಕ್ಷಣ ಇಲಾಖೆ ಮತ್ತು ಸಹೋದ್ಯೋಗಿಗಳು ಹಾಗೂ ಕ್ರೀಡಾಭಿಮಾನಿಗಳು ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರಸ್ತುತ ಇವರು ಹರಪನಹಳ್ಳಿ ತಾಲೂಕಿನ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹಿಂದಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ಆರೋಗ್ಯಕ್ಕಾಗಿ ನಿತ್ಯ ವ್ಯಾಯಾಮ, ಓಡುವ ಅಭ್ಯಾಸ ಹೊಂದಿದ್ದರಿಂದ ರಾಜ್ಯ ಮಟ್ಟದ 10 ಸಾವಿರ ಮೀಟರ್ ಓಟದ ಸ್ಪರ್ಧೆಯಲ್ಲಿ ಸಾಧಿಸಿ ಇಂದು ರಾಷ್ಟ್ರ ಮಟ್ಟಕ್ಕೆ ಆಯ್ಕೆ ಆಗಿರುವುದಾಗಿ ತಿಳಿಸಿದ್ದಾರೆ.




ಹೊಸಪೇಟೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ನೇತೃತ್ವದಲ್ಲಿ ಕಾಂಗ್ರೇಸ್ ಸರ್ಕಾರದ ವಿರುದ್ಧ ಮತ್ತು ಸಿಎಂ ಸಿದ್ದರಾಮಯ್ಯ ರಾಜಿನಾಮೆಗೆ ಆಗ್ರಹಿಸಿ ಗುರುವಾರ ಪ್ರತಿಭಟನೆ ನಡೆಯಿತು. ಶಾಸಕ, ಕೃಷ್ಣನಾಯ್ಕ್, ಬಿಜೆಪಿ ಕಾರ್ಯಕರ್ತರಿದ್ದರು.

ಹಂಪಿ ಟೈಮ್ಸ್
HAMPI TIMES

# ವಿಜ್ಞಾನ

## ಮರಗಳಂತೆ ಪ್ರಾಣಿಗಳು ಏಕೆ ಹೆಚ್ಚಿನ ಜೀವಿತಾವಧಿ ಹೊಂದಿಲ್ಲ?

■ ಆರ್.ಬಿ.ಗುರುಬಸವರಾಜ

ರೋಜ ತಾತನ ಜೊತೆಗೆ ವಾಕಿಂಗ್ ಹೋಗಿದ್ದಳು. ಕೆರೆಯ ಬಳಿಯ ಅರಳಿ ಮರದ ಕೆಳಗೆ ಇಬ್ಬರೂ ಕುಳಿತು ಸಂಜೆಯ ಸೊಬಗನ್ನು ಸವಿಯುತ್ತಿದ್ದರು. ಮರದ ಕೆಳಗೆ ಕುಳಿತ ರೋಜಾಳಿಗೆ ಅರಳಿ ಮರದ ಆಯಸ್ಸು ತಿಳಿಯುವ ಮನಸ್ಸಾಯಿತು. "ತಾತ ಈ ಮರದ ಆಯಸ್ಸು ಎಷ್ಟಿರಬಹುದು? ಎಂದಳು. ತಾತನು 'ಇದು ನಮ್ಮ ತಾತ ಮುತ್ತಾತರ ಕಾಲದಿಂದಲೂ ಇರುವ ಹಳೆಯ ಮರ. ಇದರ ನಿಖರವಾದ ಆಯಸ್ಸು ತಿಳಿದಿಲ್ಲ. ಆದರೆ ನಮ್ಮ ತಾತ ಹೇಳುವ ಪ್ರಕಾರ ಇದರ ವಯಸ್ಸು ಸುಮಾರು 350 ರಿಂದ 400 ವರ್ಷಗಳು ಇರಬಹುದು. ಎಂದರು. ಅವಳಿಗೆ ಆಶ್ಚರ್ಯವಾಯಿತು. "ಏನೂ! ಈ ಮರಕ್ಕೆ ಅಷ್ಟೊಂದು ವಯಸ್ಸಾಗಿದೆಯಾ?' ಎಂದು ಅಚ್ಚರಿ ವ್ಯಕ್ತಪಡಿಸಿದಳು.



ಅದಕ್ಕೆ ತಾತ ಹೌದು ಎಂಬಂತೆ ತಲೆ ಅಲ್ಲಾಡಿಸಿದರು. "ತಾತ, ಮರಗಳಂತೆ ಪ್ರಾಣಿಗಳು ಏಕೆ ಹೆಚ್ಚಿನ ಜೀವಿತಾವಧಿ ಹೊಂದಿಲ್ಲ?" ಎಂದಳು. ಅದಕ್ಕೆ ತಾತ ತಮ್ಮ ಅನುಭವದ ಮಾತುಗಳನ್ನು ಹೇಳಿದರು.

ಜೀವಿಯ ಜೀವಿತಾವಧಿಯು ಆನುವಂಶಿಕ ಮತ್ತು ಪರಿಸರದ ಅಂಶಗಳ ಸಂಕೀರ್ಣವಾದ ಪರಸ್ಪರ ಕ್ರಿಯೆಯಿಂದ ಪ್ರಭಾವಿತವಾಗಿರುತ್ತದೆ. ಮರಗಳು ಸಾಮಾನ್ಯವಾಗಿ ಪ್ರಾಣಿಗಳಿಗಿಂತ ಹೆಚ್ಚು ಕಾಲ ಏಕೆ ಬದುಕುತ್ತವೆ ಎಂಬುದಕ್ಕೆ ಯಾವುದೇ ಸರಳ ವಿವರಣೆಯಿಲ್ಲ. ಪ್ರಾಣಿಗಳು ಮತ್ತು ಮರಗಳು ವಿಭಿನ್ನ ಜೀವನ ಇತಿಹಾಸಗಳನ್ನು ಮತ್ತು ವಿಕಸನೀಯ ಕಾರ್ಯತಂತ್ರಗಳನ್ನು ಹೊಂದಿದ್ದು ಅದು ಅವುಗಳ ವಿಭಿನ್ನ ಜೀವಿತಾವಧಿಗೆ ಕಾರಣವಾಗಿದೆ. ಮರಗಳು ದೀರ್ಘಾವಧಿಯ ಜೀವಿಗಳಾಗಿವೆ.

ಪ್ರಾಣಿಗಳು ಸಾಮಾನ್ಯವಾಗಿ ಮರಗಳಿಗಿಂತ ಚಿಕ್ಕದಾಗಿರುತ್ತವೆ (ಕೆಲವು ಪ್ರಾಣಿಗಳು ಮರಗಳಿಗಿಂತ ದೊಡ್ಡದಾಗಿವೆ) ಮತ್ತು ಹೆಚ್ಚು ಚಲನಾತ್ಮಕ ಆಗಿರುತ್ತವೆ. ಇದರಿಂದಾಗಿ ಪ್ರಾಣಿಗಳು ಪರಭಕ್ಷಕ, ರೋಗ ಮತ್ತು ಪರಿಸರದ ಅಪಾಯಗಳಿಗೆ ಒಳಗಾಗುತ್ತವೆ. ಅದು ಅವುಗಳ ಜೀವಿತಾವಧಿಯನ್ನು ಕಡಿಮೆ ಮಾಡುತ್ತದೆ. ಅಲ್ಲದೇ ಪ್ರಾಣಿಗಳು ಸಾಮಾನ್ಯವಾಗಿ ಮರಗಳಿಗಿಂತ ಹೆಚ್ಚಿನ ಚಯಾಪಚಯ ದರಗಳನ್ನು ಹೊಂದಿವೆ. ಅಂದರೆ ಅವುಗಳ ಜೀವಕೋಶಗಳು ಹೆಚ್ಚು ಸಕ್ರಿಯವಾಗಿರುತ್ತವೆ ಮತ್ತು ಕಾಲಾನಂತರದಲ್ಲಿ ಹೆಚ್ಚಿನ ಹಾನಿಯನ್ನು ಹೊಂದುತ್ತವೆ. ಪ್ರಾಣಿಗಳ ಆಯಸ್ಸು ಕಡಿಮೆ ಇರಲು ಇದು ಕಾರಣವಾಗಿದೆ.

ಚಯಾಪಚಯ, ಸಂತಾನೋತ್ಪತ್ತಿ, ಪರಿಸರ ಮತ್ತು ಅನುವಂಶಿಕತೆ ಸೇರಿದಂತೆ ವಿವಿಧ ಅಂಶಗಳ ಸಂಕೀರ್ಣ ಕ್ರಿಯೆಗಳು ಪ್ರಾಣಿಗಳು ಮತ್ತು ಮರಗಳ ನಡುವಿನ ಜೀವಿತಾವಧಿ ವ್ಯತ್ಯಾಸಕ್ಕೆ ಕಾರಣವಾಗಿವೆ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಸುನಿತಾ ವಿಲಿಯಮ್ಸ್... ತ್ರಿಶಂಕು ಸ್ಥಿತಿಯಲ್ಲಿ

ಸುನೀತಾ ವಿಲಿಯಮ್ಸ್.... ಹೆಸರನ್ನು ಕೇಳಿದೊಡನೆ ಹೌದಲ್ವೇ! ಆಕೆ ಇನ್ನೂ ಬಾಹ್ಯಾಕಾಶದಿಂದ ಮರಳಿ ಬಂದಿಲ್ಲ ಎಂಬ ವಿಚಾರ ಥಟ್ಟನೆ ಮನಸ್ಸಿಗೆ ಬಂದು ಕೊಂಚ ಕಸಿವಿಸಿಯನ್ನು ಉಂಟುಮಾಡುತ್ತದೆ,ಮನ ಕೇಡನ್ನು ಶಂಕಿಸಿ ಗಾಬರಿಗೊಳ್ಳುತ್ತದೆ, ಎದೆ ಬಡಿತ ಹೆಚ್ಚಾಗುತ್ತದೆ. 2003 ಫೆಬ್ರುವರಿ ಒಂದರಂದು ಕೊಲಂಬಿಯಾ ಬಾಹ್ಯಾಕಾಶ ನೌಕೆಯಲ್ಲಿ ಭೂಮಿಗೆ ಮರಳುತ್ತಿದ್ದ ಸಂದರ್ಭದಲ್ಲಿ ನೌಕೆಯ ಉಷ್ಣ ನಿರೋಧಕ ಕವಚಕ್ಕೆ ಆದ ಹಾನಿಯಿಂದಾಗಿ ಭಾರತೀಯ ಮೂಲದ ಕಲ್ಪನಾ ಚಾವ್ಲಾ ಸೇರಿದಂತೆ ಏಳು ಜನ ಗಗನಯಾನಿಗಳು ಮೃತಪಟ್ಟದ್ದು ನೆನಪಾಗುತ್ತದೆ. ಅದರಲ್ಲೂ ಭಾರತೀಯ ಮೂಲದ ಕಲ್ಪನಾ ಚಾವ್ಲಾಳ ದುರಂತ ಅಂತ್ಯದ ನೆನಪಾಗಿ ಮನ ನಡುಗುತ್ತದೆ. ಮರುಕ್ಷಣವೇ ಸುನಿತಾ ವಿಲಿಯಮ್ಸ್ ಸುರಕ್ಷಿತವಾಗಿ ಮರಳಿ ಬರಲಿ ಎಂದು ಮನ ಹಾರೈಸುತ್ತದೆ.



ಭಾರತೀಯ ಮೂಲದ ಸುನಿತಾ ವಿಲಿಯಮ್ಸ್ ಅವರ ತಂದೆ ಗುಜರಾತ್ ನ ಮೆಹಸಾನಾ ಜಿಲ್ಲೆಯವರು. ಅಮೆರಿಕಾದ ಒಹಾಯೋ ರಾಜ್ಯದಲ್ಲಿ ನೆಲೆಸಿರುವ ಅವರಿಗೆ 1965 ಸೆಪ್ಟೆಂಬರ್ 19 ರಂದು ಸುನೀತಾ ವಿಲಿಯಮ್ಸ್ ಜನಿಸಿದಳು. ತನ್ನ ಸಾಂಪ್ರದಾಯಿಕ ಶಿಕ್ಷಣವನ್ನು ಪೂರೈಸಿದ ಸುನಿತಾ ಅಮೆರಿಕಾದ ನೌಕಾಪಡೆಯಲ್ಲಿ ಕ್ಯಾಪ್ಟನ್ ಆಗಿದ್ದರು. ಮುಂದೆ 1998ರಲ್ಲಿ ನಾಸಾದ ಗಗನಯಾನಿಯಾಗಿ ಆಕೆ ಆಯ್ಕೆಯಾದಳು. ಹಲವಾರು ವರ್ಷಗಳ ಸತತ ತರಬೇತಿಗಳ ನಂತರ ಮೊದಲ ಬಾರಿ 2007ರಲ್ಲಿ ಆಕೆ ನಾಸಾದ ಗಗನಯಾತ್ರಿಯಾಗಿ ಅಂತರಿಕ್ಷಯಾನ ಮಾಡಿದ್ದಳು. 2012ರಲ್ಲಿ ಎರಡನೇ ಬಾರಿ ಬಾಹ್ಯಾಕಾಶ ಯಾನವನ್ನು ಮಾಡಿ ಅತಿ ಹೆಚ್ಚು ದಿನಗಳನ್ನು ಬಾಹ್ಯಾಕಾಶದಲ್ಲಿ ಕಳೆದ ಸುನೀತಾ ವಿಲಿಯಂ ಮೊದಲ ಬಾರಿ 2007ರಲ್ಲಿ ನಾಲ್ಕು ಸಲ ಬಾಹ್ಯಾಕಾಶ ನಡಿಗೆಯನ್ನು ಕೈಗೊಂಡರೆ, ಎರಡನೇ ಬಾರಿ ಮೂರು ಸಲ ಬಾಹ್ಯಾಕಾಶ ನಡಿಗೆಯನ್ನು ಕೈಗೊಂಡಿದ್ದರು. ಮೊದಲ ಎರಡು ಅವಧಿಯಲ್ಲಿ ಅವರು ಒಟ್ಟು 322 ದಿನಗಳನ್ನು ಅಂತರಿಕ್ಷದಲ್ಲಿ ಕಳೆದಿದ್ದಾರೆ.ಇದೀಗ ಆಕೆ ಅತ್ಯಂತ ಅನುಭವಿ ಮಹಿಳಾ ಗಗನಯಾನಿ.

ಈ ಹಿಂದೆ ಬಾಹ್ಯಾಕಾಶಯಾನಕ್ಕೆ ಬಳಸುತ್ತಿದ್ದ ಗಗನನೌಕೆಗೆ ಪರ್ಯಾಯವಾಗಿ ಇದೀಗ ಬೋಯಿಂಗ್ ಸ್ಟಾರ್ ಲೈನರ್ ನವರ ಸ್ಪೇಸ್ ಕ್ಯಾಪ್ಸುಲ್ನಲ್ಲಿ ಒಂದು ವಾರ ಕಾಲದ ಕಾರ್ಯನಿಮಿತ್ತ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ 2024ರ ಜೂನ್ 5ರಂದು ತನ್ನ ಸಹೋದ್ಯೋಗಿ ಬುಚ್ ವಿಲ್ಮೋರ್ ಅವರೊಂದಿಗೆ ಪಯಣಿಸಿದ್ದ ಸುನಿತಾ 14ನೇ ತಾರೀಕಿನಂದು ಅದೇ ಸ್ಪೇಸ್ ಕ್ಯಾಪ್ಸೂಲ್ ನಲ್ಲಿ ಮರಳಿ ಬರಬೇಕಿತ್ತು.... ಆದರೆ ಕಾರಣಾಂತರಗಳಿಂದ ಅವರ ಪಯಣ ಸಾಧ್ಯವಾಗದೆ ಇಬ್ಬರೂ ಗಗನಯಾನಿಗಳು ಅಲ್ಲಿಯೇ ಉಳಿಯಬೇಕಾದ ಪರಿಸ್ಥಿತಿ ಉಂಟಾಗಿದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಈ ಹಿಂದೆ ಸ್ಟಾರ್ ಲೈನರ್ 2019 ರಲ್ಲಿ ತನ್ನ( ಸ್ಪೇಸ್ ಕ್ಯಾಪ್ಸುಲ್) ಬಾಹ್ಯಾಕಾಶ ಕೋಶವನ್ನು ಮಾನವರ ಹಿತವಾಗಿ ಉಡಾಯಿಸಿದ್ದು ಅದು ಕಕ್ಷೆಗೆ ಸೇರಲು ಯಶಸ್ವಿಯಾಗಿದ್ದರೂ ಕೂಡ ಬಾಹ್ಯಾಕಾಶ ನಿಲ್ದಾಣವನ್ನು ತಲುಪಿರಲಿಲ್ಲ. ಮತ್ತೆ 2022 ರಲ್ಲಿ ಮತ್ತೊಮ್ಮೆ ಬಾಹ್ಯಾಕಾಶ ಯಾನ ಪರೀಕ್ಷೆ ನಡೆಸಿದಾಗ ಅದು ಯಶಸ್ವಿಯಾಗಿದ್ದರೂ ಹಿಂದಿರುಗಿದ ಬಾಹ್ಯಾಕಾಶ ಕೋಶ (ಸ್ಪೇಸ್ ಕ್ಯಾಪ್ಸುಲ್ಲಿ) ದಲ್ಲಿ ಹಲವಾರು ದೋಷಗ ಳಿದ್ದುದು ಪತ್ತೆಯಾಗಿತ್ತು.

ಇದೀಗ ಮೂರನೇ ಬಾರಿ ಅಮೆರಿಕದ ನಾಸಾ ಗಗನ ಯಾನ ಸಂಸ್ಥೆ ಮತ್ತು ಮತ್ತು ಬೋಯಿಂಗ್ ಸ್ಟಾರ್ ಲೈನರ ಗಳು ಜಂಟಿಯಾಗಿ ಜೂನ್ 5ರಂದು ಮೊದಲ ಮಾನವಸಹಿತ ಬಾಹ್ಯಾಕಾಶ ಪಯಣಕ್ಕೆ ನನ್ನದ್ದವಾಗಿರುವ ಸ್ಪೇಸ್ ಕ್ಯಾಪ್ಸುಲನ್ನು ಪರೀಕ್ಷಿಸುವ ಸಲುವಾಗಿ ಅಮೆರಿಕಾದ ಫ್ಲೋರಿಡಾದಿಂದ ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರನ್ನು 400 ಕಿಲೋಮೀಟರ್ ದೂರದ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕರೆದೊಯ್ದಿದೆ.

ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ವಿವಿಧ ಸಂಶೋಧನಾ ಕಾರ್ಯಗಳಲ್ಲಿ ತೊಡಗಿರುವ ಇನ್ನಿತರ ಏಳು ಗಗನಯಾತ್ರಿಗಳ ಕೆಲಸಕ್ಕೆ ನೆರವಾಗಲು ಈ ಇಬ್ಬರು ಗಗನಯಾತ್ರಿಗಳು ಹೋಗಿದ್ದಾರೆ.. ಇಂಜಿನ್ ನಲ್ಲಿ ಕಂಡು ಬಂದ ದೋಷದಿಂದಾಗಿ ನೌಕೆಯನ್ನು ಸ್ವಯಂಚಾಲಿತವಾಗಿ ಬಾಹ್ಯಾಕಾಶ ನಿಲ್ದಾಣಕ್ಕೆ ಜೋಡಿಸುವಂತಹ ವ್ಯವಸ್ಥೆ ಇತ್ತು. ಆದರೆ ಈ ಸ್ವಯಂ ಚಾಲಿತ ವ್ಯವಸ್ಥೆಯು ವಿಫಲವಾದ ಕಾರಣ ಬಾಹ್ಯಾಕಾಶ ನಿಲ್ದಾಣಕ್ಕೆ ನೌಕೆಯನ್ನು ಜೋಡಿಸಲು ಸುನೀತಾ ಮತ್ತು ವಿಲ್ಮೋರ್ ಹರಸಾಹಸ ಪಡಬೇಕಾಯಿತು.

ಸ್ಟಾರ್ ಲೈನರ್ ಬಾಹ್ಯಾಕಾಶಕೋಶದಲ್ಲಿನ ಯಾಂತ್ರಿಕ ದೋಷಗಳು ಪರಿಹಾರವಾಗಲಿವೆ ಎಂಬ ವಿಶ್ವಾಸ ನಾಸಾ ಮತ್ತು ಬೋಯಿಂಗ್ ಸಂಸ್ಥೆಗಳಿಗೆ ಇದೆ. ಅದೇ ಬಾಹ್ಯಾಕಾಶ ನೌಕೆಯಲ್ಲಿ ಇಬ್ಬರೂ ಭೂಮಿಗೆ ಮರಳುವ ನಿರೀಕ್ಷೆಯು ಇದೆ... ಇದರ ಜೊತೆಗೆ ಅವರಿಬ್ಬರನ್ನು ಮತ್ತೆ ಭೂಮಿಗೆ ಮರಳಿ ತರಲು ಬೇರೊಂದು ಮಾರ್ಗವನ್ನು ಕೂಡ ವಿಜ್ಞಾನಿಗಳು ಯೋಚಿಸುತ್ತಿದ್ದಾರೆ... ಆದರೆ ಅದು ಕಾರ್ಯಗತಗೊಂಡರೂ ಕೂಡ ಆರು ತಿಂಗಳ ಕಾಲ ಕಾಯಬೇಕಾಗಿದೆ.

ಸದ್ಯದ ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಸುನಿತಾ ಮತ್ತು ವಿಲ್ಮೋರ್ ಹಲವಷ್ಟು ಮನೋದೈಹಿಕ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಸಾಕಷ್ಟು ವಿಕಿರಣಗಳಿಗೆ ಆಕೆ ಮತ್ತು ಆಕೆಯ ಸಹೋದ್ಯೋಗಿ ತೆರೆದುಕೊಳ್ಳುವುದರಿಂದ ವಿಕಿರಣ ಸಂಬಂಧಿ ರೋಗಗಳಿಗೆ ಒಳಗಾಗುವ ಅಪಾಯ ಇರುತ್ತದೆ. ಶೂನ್ಯ ಗುರುತ್ವಾಕರ್ಷಣೆ ಇರುವ ಬಾಹ್ಯಾಕಾಶದಲ್ಲಿ ಮೂಳೆಯ ಸಾಂದ್ರತೆ ಕಡಿಮೆಯಾಗುವ ಮಾಂಸ ಖಂಡಗಳು ಕ್ಷೀಣಿಸುವ ಅಪಾಯ ಎದುರಾಗಬಹುದು. ಇದರ ಜೊತೆಗೆ ಮಾನಸಿಕವಾಗಿಯೂ ಕುಗ್ಗಬಹುದಾದ ಸಂಭವನೀಯತೆಗಳು ಅಧಿಕ.

ಆಶಾದಾಯಕ ಸಂಗತಿ ಎಂದರೆ ಗಗನಯಾತ್ರಿಗಳು ಒಮ್ಮೆ ಬಾಹ್ಯಾಕಾಶ ನಿಲ್ದಾಣಕ್ಕೆ ಹೋದರೆ ಆರು ತಿಂಗಳುಗಳ ಕಾಲ ಅಲ್ಲಿಯೇ ಉಳಿಯಬೇಕಾಗುತ್ತದೆ... ಕೆಲವೊಮ್ಮೆ ಒಂದು ವರ್ಷವೂ ಆಗಬಹುದು. ಅದಕ್ಕೆ ಬೇಕಾದ ಮಾನಸಿಕ ಸಿದ್ಧತೆಗಳನ್ನು ಬಾಹ್ಯಾಕಾಶಯಾನಿಗಳು ಮಾಡಿಕೊಂಡಿರುತ್ತಾರೆ. ಏನೇ ಆದರೂ ಅನುಭವಿ ಗಗನಯಾನಿಗಳಾಗಿರುವ ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಸುರಕ್ಷಿತವಾಗಿ ಭೂಮಿಗೆ ಮರಳಿ ಬರಲಿ ಎಂದು ಇಡೀ ಜಗದ ಜನರ ಪ್ರಾರ್ಥನೆ ಫಲಿಸಲಿ.

# ವ್ಯಕ್ತಿತ್ವ ಮತ್ತು ಸೃಜನಾತ್ಮಕ ಬದುಕನ್ನು ಗೌರವಿಸೋಣ...

■ ಡಾ. ರಾಜಶೇಖರ ಜಮದಂಡಿ



ಸಮಾಜದಲ್ಲಿ ವಿಶಿಷ್ಟ ವ್ಯಕ್ತಿಗಳು ನಮ್ಮ ನಡುವೆ ಇದ್ದರೂ ಅವರನ್ನು ಅರ್ಥೈಸಿ ಕೊಳ್ಳದೇ ಅವರು ಕಣ್ಮರೆಯಾದಾಗ ಗುಣ ಗಾನ ಮಾಡುತ್ತೇವೆ. ಅವರು ಎಲೆಮರೆಯ ಕಾಯಿಯಂತೆ ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಬಂದಿರುತ್ತಾರೆ. ಅದನ್ನು ಗಮನಿಸುವ ಸೂಕ್ಷ್ಮತೆ ಇರುವುದಿಲ್ಲ. ಅಂತಹವರು ಇದ್ದೂರಲ್ಲಿಯೇ ಇರಬಹುದು ಅಥವಾ ಪರ ಊರಿಗೆ ಹೋಗಿ ಅಲ್ಲಿ ಉತ್ತಮ ಕೆಲಸಗಳಲ್ಲಿ ತೊಡಗಿಸಿ ಕೊಂಡಿರಬಹುದು. ಉದಾಹರಣೆಗೆ: ಸೃಜನಾತ್ಮಕ ಕ್ರಿಯೆಗಳಾದ ಸಾಹಿತ್ಯ, ಸಂಶೋಧನೆ, ಸಂಗೀತ, ಹಾಡು, ಚಿತ್ರಕಲೆ, ಶಿಲ್ಪಕಲೆ, ಶಾಸನ ಸಂರಕ್ಷಣೆ, ವ್ಯಕ್ತಿತ್ವ ಶಿಬಿರ, ಮಕ್ಕಳಿಗೆ ತಿಳಿವಳಿಕೆ, ಪರಿಸರ ರಕ್ಷಣೆ, ಸಂಗ್ರಹಣೆ(ನಾಣ್ಯ, ಅಂಚೆಚೀಟಿ, ಪುಸ್ತಕ, ರಾಷ್ಟ್ರಧ್ವಜ ಇತ್ಯಾದಿ) ಆರೋಗ್ಯಸೇವೆ, ಕೃಷಿಣಿಕೆ, ಪ್ರಾಣಿಪಕ್ಷಿಗಳ ಸಾಕಾಣಿಕೆ ಯಾಗಿರಬಹುದು. ಅಲ್ಲದೆ ಮಾನವೀಯ ನೆಲೆಯಲ್ಲಿ ಉಪಕಾರ, ನೈತಿಕ ನೆಲೆಯಲ್ಲಿ ಆದರ್ಶದ ಮಾತುಗಳು ಮತ್ತು ನೇರವಾಗಿ ಸಹಾಯ-ಸಹಕಾರಗಳು ಮುಂತಾದವುಗಳಲ್ಲಿ ನಿಸ್ವಾರ್ಥವಾಗಿ ತೊಡಗಿಸಿಕೊಂಡಿರುತ್ತಾರೆ.



ಅವರು ಇನ್ನಿತರ ಯಾವುದೇ ಮೂಲ ಆಧಾಯಗಳಿಲ್ಲದೆ ಯಾರಾದರು ಏನಾದರೂ ನೀಡಿದಾಗ ಮಾತ್ರ ಸ್ವೀಕರಿಸುವ ಮನೋಭಾವ ಹೊಂದಿರುತ್ತಾರೆ. ಅದೇರೀತಿ ಇವುಗಳ ಆಧಾರದ ಮೇಲೆ ತಕ್ಕಮಟ್ಟಿಗೆ ಬದುಕನ್ನು ಕಟ್ಟಿಕೊಂಡಿರಬಹುದು. ಅಂಥವರ ಬದುಕನ್ನು ಉಳ್ಳವರು ಪತ್ತೆಮಾಡಿ ದಾರಿ ತೋರಿದರೆ ಅವರಿಂದ ಇನ್ನಷ್ಟು ಉತ್ತಮ ಕೆಲಸಕಾರ್ಯಗಳು ಸಮಾಜದಲ್ಲಿ ನಿರೀಕ್ಷಿಸಬಹುದು. ಹಾಗೆಯೇ ಅವರ 'ಕಲೆ'ಯ ಸಂರಕ್ಷಣೆಯನ್ನು ಸರಿಯಾದ ರೀತಿಯಲ್ಲಿ ಮಾಡಿದರೆ ಅದು ಮುಂದಿನ ಪೀಳಿಗೆಯವರಿಗೆ ಅನುಕೂಲವಾದೀತು. ಇಲ್ಲದಿದ್ದರೆ ಅವರೊಳಗಿರುವ 'ಕಲೆ' ನಶಿಸಿ ಹೋಗುತ್ತದೆ.

ಇದ್ದಾಗ ಅವರ ಸಾರ್ಥಕ ಕೆಲಸಗಳನ್ನು ನೋಡಿ ಪ್ರಶಸ್ತಿ, ಬಹುಮಾನ, ನೀಡುವುದು ಸುತ್ತಮುತ್ತಲಿರುವವರ ಕರ್ತವ್ಯ. ಅವರನ್ನು ಸರ್ಕಾರದ ಮಟ್ಟದಲ್ಲಿ, ಸಂಘ-ಸಂಸ್ಥೆಗಳ ಮಟ್ಟದಲ್ಲಿ ತಿಳಿಸಿ ಅವರಿಗೆ ಸರಿಯಾದ ಗೌರವ-ಸನ್ಮಾನಗಳನ್ನು ನೀಡಿ ಇನ್ನಷ್ಟು ಉತ್ತೇಜನ ಅಥವಾ ಬೆಂಬಲ ನೀಡಿದರೆ ಅವರಿಂದ ಇನ್ನೂ ಒಳ್ಳೆಯ ಕೆಲಸಗಳು ನಡೆಯುತ್ತವೆ. ಇಂತವರಿಂದ ಆಯಾ ಕ್ಷೇತ್ರಗಳ ಅಭಿವೃದ್ಧಿಗಳು ಸಕಾಲದಲ್ಲಿ ನಡೆದು ಸಮಾಜದಲ್ಲಿ ಸಮಷ್ಟಿಪ್ರಜ್ಞೆ ಅನಾವರಣಗೊಳ್ಳುತ್ತಾ ಸಾಗುತ್ತದೆ.

ಯಾವುದಾದರೂ ಕಲಾ ಮಾಧ್ಯಮದಲ್ಲಿರುವ ಮನುಷ್ಯನ ತತ್ವಾದರ್ಶಗಳು ಸಮಾಜದ ಉನ್ನತಿಗೆ ಪ್ರೇರಕವಾಗಿರುತ್ತವೆ. ಆತನ ಪೂರ್ವಾಪರಗಳನ್ನು ಪರಿಶೀಲಿಸಿ ಸರಿಯಾದ ಮಾನದಂಡಗಳ ಮೂಲಕ ಗೌರವಿಸುವ ಪ್ರವೃತ್ತಿ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರ ಜವಬ್ದಾರಿ. ಕೆಲವು ಕಡೆಗಳಲ್ಲಿ ವ್ಯಕ್ತಿಯ ನಿಜವಾದ ಕಲೆಯನ್ನರಿಯದೇ ಆತ ಸತ್ತ ನಂತರ ಮರಣೋತ್ತರವಾಗಿ ದೊಡ್ಡ ದೊಡ್ಡ ಪ್ರಶಸ್ತಿ ಘೋಷಿಸುವುದು ಎಷ್ಟರಮಟ್ಟಿಗೆ ಸರಿ? ಈರೀತಿ ಕಲಾರಾಧಕನ ಬದುಕಿಗೆ ಆಶ್ರಯ, ಅನುಕೂಲಗಳನ್ನು ನೀಡದೆ ಆತ ಇಲ್ಲವಾದಾಗ ನಾನಾ ರೀತಿಯಲ್ಲಿ ವೈಭವೀಕರಿಸಿ ಕೊಂಡಾಡುತ್ತಾ ಕೊನೆಯಲ್ಲಿ ಹೆಗಲು ಕೊಡುವುದು ವಿಪರ್ಯಾಸವಲ್ಲವೆ? ಒಟ್ಟಾರೆ ಸಾಧ್ಯವಾದಷ್ಟು ವ್ಯಕ್ತಿ ಜೀವಂತವಿರುವಾಗಲೇ ವ್ಯಕ್ತಿತ್ವಕ್ಕೆ ಅಭಿಮಾನ ಪೂರ್ವಕವಾಗಿ ಪ್ರೋತ್ಸಾಹ ನೀಡೋಣ.

# ಅಲೆಮಾರಿ ಸಮುದಾಯದ ಮಕ್ಕಳ ಕಲಿಯುವ ಕನಸುಗಳು

ಕಳೆದ ವರ್ಷ ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕಿನ ಹಿರೇಬನ್ನಿಗೋಳದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಒಂದು ಘಟನೆ ನಡೆಯಿತು. ತನ್ನ ಹೊಲಕ್ಕೆ ಹಂದಿಗಳು ನುಗ್ಗಿ ದಾಂಧಲೆ ಮಾಡಿದವು ಎಂದು ಪ್ರಹ್ಲಾದ್ ಶೆಟ್ಟರ್ ಎನ್ನುವ ವ್ಯಕ್ತಿ ಶಾಲೆಗೆ ನುಗ್ಗಿ ಹಂದಿ ಸಾಕುವವರ ಮಗಳು ಯಾರೆಂದು ಕೇಳಿ, ಎದ್ದು ನಿಂತ ಗೌರಿಯನ್ನು ಹೊಡೆದು, ಹೊರಗೆ ಎಳೆದು ತರುತ್ತಾನೆ. ಮಗು ತತಕ್ಷಣದ ಆಕ್ರಮಣಕ್ಕೆ ಬೆಚ್ಚಿಬಿದ್ದು ಕಿಟಾರನೆ ಕಿರುಚುತ್ತದೆ. 'ಸಾಲಿ ಓದಾಕ ಬಂದರ ಹಂದಿ ಕಾಯೋರು ಯಾರು? ಎಂದು ಕೆಂಗಣ್ಣಿನಿಂದ ಶೆಟ್ಟರ್ ಗದರುತ್ತಾನೆ. ತರಗತಿಯಲ್ಲಿದ್ದ ಅತಿಥಿ ಶಿಕ್ಷಕಿ ಚಂದ್ರಿಕಾ ಬಾದಡಗಿ ಆಕಸ್ಮಿಕ ಘಟನೆಗೆ ವಿಚಲಿತರಾಗುತ್ತಾರೆ. ಇಡೀ ಶಾಲೆಯ ಮಕ್ಕಳ ಎದುರು 'ಹಂದಿ ಸಾಕೋರ ಮಗಳು' ಎನ್ನುವ ಅವಮಾನ ಆ ಮಗುವನ್ನು ಘಾಸಿಗೊಳಿಸುತ್ತದೆ. ಈ ಘಟನೆಯ ಸದ್ದು ಕೇಳಿ ಮುಖ್ಯ ಗುರುಗಳಾದ ಅನುರಾಧಓಡಿಬರುತ್ತಾರೆ.ವಿಚಾರಿಸಿಎಸ್.ಡಿ.ಎಂ.ಸಿಸದಸ್ಯರನ್ನೊಳಗೊಂಡಂತೆ ಪೋಲೀಸರಿಗೆ ಲಿಖಿತ ದೂರು ನೀಡುತ್ತಾರೆ.

ಕೊರವ ಅಲೆಮಾರಿ ಸಮುದಾಯದ ಸಂಜೀವಪ್ಪ ಮತ್ತು ದುರುಗಮ್ಮ ಮಕ್ಕಳಾದ ಗೌರಿ, ದೀಪಾ, ಪೇತ್ರು ಚಿನ್ನುವಿನ ಪುಟ್ಟ ಕುಟುಂಬ. ಇದರಲ್ಲಿ ಮೊದಲ ಮೂರು ಮಕ್ಕಳು ಕ್ರಮವಾಗಿ ಮೂರು, ಎರಡು, ಒಂದನೆ ತರಗತಿಯಲ್ಲಿ ಓದುತ್ತಾರೆ. ಸಂಜೀವಪ್ಪ ಮತ್ತು ಗೌರಮ್ಮ ಜಾತ್ರೆಗಳಲ್ಲಿ ಬಲೂನು ಪೀಪಿ ಮಕ್ಕಳ ಆಟದ ಸಾಮಾನುಗಳನ್ನು ಮಾರುತ್ತಾರೆ. ಹೀಗಾಗಿ ಹೊಟ್ಟೆಪಾಡಿಗಾಗಿ ಊರೂರ ಜಾತ್ರೆಗಳಿಗೆ ಚಿಕ್ಕ ಮಗು ಚಿನ್ನುವಿನೊಂದಿಗೆ ಹೋಗುತ್ತಾರೆ. ಆಗ ತಮಗಿರುವ ಆಶ್ರಯ ಮನೆಯಲ್ಲಿ ಮೂರು ಮಕ್ಕಳು ಮಾತ್ರ ಉಳಿಯುತ್ತಾರೆ. ಒಂಬತ್ತು ವರ್ಷದ ಗೌರಿ ತಾನೆ ಅಡುಗೆ ಮಾಡಿ ತನ್ನ ತಂಗಿ ತಮ್ಮನಿಗೆ ಊಟ ಮಾಡಿಸಿಕೊಂಡು, ಅವರನ್ನು ತಯಾರಿ ಮಾಡಿ, ತಾನೂ ರೆಡಿಯಾಗಿ ದಿನಾಲು ಮೂವರೂ ಶಾಲೆಗೆ ಹೋಗುತ್ತಾರೆ. ಬಿಸಿಯೂಟ ಇರುವ ಕಾರಣ ಮದ್ಯಾಹ್ನದ ಊಟದ ಸಮಸ್ಯೆ ಈ ಮಕ್ಕಳಿಗಿಲ್ಲ.

ಸಂಜೀವಪ್ಪನ ಚಿಕ್ಕಪ್ಪನಿಗೆ ಸೇರಿದ 2 ದೊಡ್ಡ ಹಂದಿ ಮತ್ತು ಆರು ಚಿಕ್ಕ ಮರಿಗಳಿವೆ. ಚಿಕ್ಕಪ್ಪ ಹೊಟ್ಟೆಪಾಡಿಗೆ ಸಣ್ಣಪುಟ್ಟ ವ್ಯಾಪಾರಕ್ಕೆ ಹೋಗುತ್ತಾರೆ. ಹೀಗಾಗಿ ಚಿಕ್ಕಪ್ಪನ ಹಂದಿಗಳ ಜವಾಬ್ದಾರಿ ಸಂಜೀವಪ್ಪನ ಮನೆಯವರ ಮೇಲೆ ಬಿದ್ದಿದೆ. ಸಂಜೀವಪ್ಪ ತನ್ನ ಚಿಕ್ಕಪ್ಪನಿಗೆ ಇದೇ ಶೆಟ್ಟರ್ ಅವರಿಂದ ತಾನು ಸಾಕ್ಷಿಯಾಗಿ ಬಡ್ಡಿ ಸಾಲ ಕೊಡಿಸಿದ್ದಾನೆ. ಆ ಸಾಲ ಮರುಪಾವತಿಸುವ ಗಡುವು ಇನ್ನು ಎರಡು ತಿಂಗಳಿದೆ. ಹೀಗಾಗಿ ಪ್ರಹ್ಲಾದ್ ಶೆಟ್ಟರಿಗೆ ತಾನು ಸಾಲ ಕೊಟ್ಟವನ ಹಂದಿಗಳೆ ನನ್ನ ಹೊಲದಲ್ಲೂ ದಾಂಧಲೆ ಮಾಡುವ ಬಗ್ಗೆ ಸಿಟ್ಟಿರಬೇಕು. ಹೊಲದಲ್ಲಿ ಹಂದಿಗಳು ದಾಂಧಲೆ ಮಾಡಿದ ಬಗ್ಗೆ ಶೆಟ್ಟರು ಸಂಜೀವಪ್ಪನಿಗೆ ಫೋನ್ ಮಾಡಿದಾಗ 'ನಾವು ದುಡಕಂಡು ತಿನ್ನೋಕೆ ಜಾತ್ರೆಗೆ ಬಂದೀವಿ ಧನಿ, ಮಕ್ಕಳಿಗೆ ಹಂದಿ ನೋಡಕಳ್ಳಾಕ ಹೇಳಿದ್ದೆ..ಅವರು ಶಾಲೆಗೆ ಹೋಗಿರಬೇಕು' ಎಂದಿದ್ದಾನೆ. 'ಹಂದಿ ಕಾಯೋದು ಬಿಟ್ಟು ನನ್ನ ಮಕ್ಕಳು ಶಾಲೆಗೆ ಹೋದ ಸಿಟ್ಟಿಗೆ ಶೆಟ್ಟರು ನನ್ನ ಮಗಳನ್ನು ಹೊಡೆದಿರಬೇಕು' ಎಂದು ಸಂಜೀವಪ್ಪ ಮುಗ್ಧವಾಗಿ ಹೇಳುತ್ತಾರೆ.



ಅರುಣ್ ಜೋಳದ
ಕೂಡ್ಲಿಗಿ ಲೇಖಕರು

Scan For Digital Colourful
HAMPI TIMES E-paper

ಈ ಘಟನೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಕರ್ನಾಟಕದ ಅಲೆಮಾರಿ ಸಮುದಾಯಗಳ ಮಕ್ಕಳ ಶಿಕ್ಷಣದ ಸ್ಥಿತಿಗತಿಗಳ ಬಗ್ಗೆ ಅರ್ಥ ಮಾಡಿಕೊಳ್ಳಬಹುದು. ಅಲೆಮಾರಿಗಳು ಹೊಟ್ಟೆಪಾಡಿಗಾಗಿ ಊರೂರು ಅಲೆಯುತ್ತಾರೆ. ಕೆಲವೊಮ್ಮೆ ಮಕ್ಕಳ ಜತೆಯೇ ಅಲೆಮಾರಿತನ ಮಾಡುತ್ತಾರೆ. ಅಂತಹವರ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆ. ಕೆಲವು ಅರೆ ಅಲೆಮಾರಿಗಳು ಒಂದೆಡೆ ನೆಲೆಸಿದರೂ, ಮಕ್ಕಳನ್ನು ಬಿಟ್ಟು ತಂದೆ ತಾಯಿಗಳು ದುಡಿಮೆಗಾಗಿ ಹೊರ ಹೋಗುತ್ತಾರೆ. ಇಂತಹ ಸಂದರ್ಭದಲ್ಲಿ ಆಯಾ ಶಾಲೆಯ ಶಿಕ್ಷಕ ಶಿಕ್ಷಕಿಯರು ಈ ಅಲೆಮಾರಿ ಬುಡಕಟ್ಟಿನ ಮಕ್ಕಳ ಬಗೆಗೆ ವಿಶೇಷ ಕಾಳಜಿ ವಹಿಸಬೇಕಾಗುತ್ತದೆ.

ಕೊರವ ಸಮುದಾಯ 2011ರ ಜನಗಣತಿಯ ಪ್ರಕಾರ 56 ಸಾವಿರ ಜನಸಂಖ್ಯೆ ಇದೆ. ಬಹುತೇಕ ಅಲೆಮಾರಿತನಕ ಕಾರಣಕ್ಕೆ ಈ ಸಮುದಾಯದ ಮಕ್ಕಳು ಅಕ್ಷರದಿಂದ ವಂಚಿತರಾಗುತ್ತಾರೆ. ಅಂತೆಯೇ ಶಿಕ್ಷಣ ಇಲಾಖೆಯು ಹೀಗೆ ಶಾಲೆಗಳಲ್ಲಿ ದಾಖಲಾದ ಅಲೆಮಾರಿ ಬುಡಕಟ್ಟು ಮಕ್ಕಳ ಬಗ್ಗೆ ಶಿಕ್ಷಕ ಶಿಕ್ಷಕಿಯರು ವಿಶೇಷ ಗಮನವನ್ನು ನೀಡುವ ಕುರಿತು ಬುಡಕಟ್ಟು ಅಲೆಮಾರಿ ಸಂಘಟನೆಗಳ ಮುಖ್ಯಸ್ಥರ ಬಳಿ ಚರ್ಚಿಸಿ ಕೆಲವು ನಿರ್ದೇಶನಗಳನ್ನು ರೂಪಿಸಬೇಕಿದೆ.



ಕನ್ನಡ ಪುಸ್ತಕ ಪ್ರಾಧೀಕಾರದ ಅಧ್ಯಕ್ಷರಾಗಿದ್ದ ಪ್ರೊ.ಎಸ್.ಜಿ.ಸಿದ್ಧರಾಮಯ್ಯ ಅವರ ಪ್ರಧಾನ ಸಂಪಾದಕತ್ವದಲ್ಲಿ ಕೆ.ಎಂ.ಮೇತ್ರಿ ಅವರ ಸಂಪಾದಕತ್ವದಲ್ಲಿ 2007–08 ರಲ್ಲಿ ಕರ್ನಾಟಕದ 22 ಅಲೆಮಾರಿ ಸಮುದಾಯಗಳ ಅಧ್ಯಯನ ಕೃತಿಗಳು ಪ್ರಕಟವಾಗಿವೆ. ಈ ಕೃತಿಗಳನ್ನು ಗಮನಿಸಿದರೆ ಅಲೆಮಾರಿ ಸಮುದಾಯದ ಮಕ್ಕಳು ಹೇಗೆ ಶಿಕ್ಷಣ ವಂಚಿತರಾಗುತ್ತಿದ್ದಾರೆ, ಇದಕ್ಕೆ ಕಾರಣಗಳೇನು ಎನ್ನುವುದು ಅರಿವಿಗೆ ಬರುತ್ತದೆ. ಅಲೆಮಾರಿತನಕ್ಕೂ, ಶಿಕ್ಷಣಕ್ಕೂ ವಿರುದ್ಧ ಸಂಬಂಧವಿದೆ. ಅಂದರೆ ನಿರಂತರವಾಗಿ ಅಲೆದಾಡಿಕೊಂಡಿರುವ ಕಾರಣ ಒಂದೆಡೆ ನಿಂತು ಶಿಕ್ಷಣ ಪಡೆಯುವುದು ಈ ಸಮುದಾಯಗಳಿಗೆ ಸಾಧ್ಯವಾಗದು. ಸಹಜವಾಗಿ ಅಲೆಮಾರಿ ಸಮುದಾಯಗಳಿಗೆ ಶಿಕ್ಷಣ ಈಗಲೂ ನಿಲುಕದ ನಕ್ಷತ್ರವೆ. ಅಲೆಮಾರಿ ಸಮುದಾಯಗಳು ಈಗ ಕೆಲವೆಡೆ ನೆಲೆ ನಿಲ್ಲುತ್ತಿದ್ದಾರೆ. ಉಳಿದಂತೆ ಅರೆ ಅಲೆಮಾರಿತನವಿದೆ.

ಕೆಲವು ಅಂಕಿಅಂಶಗಳನ್ನು ನೋಡುವುದಾದರೆ, ಅಲೆಮಾರಿ ಕುರುಬರಲ್ಲಿ 2001 ರ ಜನಗಣತಿಯ ಪ್ರಕಾರ ಸಾಕ್ಷರತೆ 25.03 ರಷ್ಟಿದೆ. ಪುರುಷರಲ್ಲಿ ಶೇ 18.44 ರಷ್ಟಿದ್ದರೆ, ಮಹಿಳೆಯರು ಶೇ 6.59 ರಷ್ಟಿದೆ. 2007 ರ ಸಮೀಕ್ಷೆ ಪ್ರಕಾರ ಅಲೆಮಾರಿ ಕುರುಬರ ಮಹಿಳೆಯರ ಶಿಕ್ಷಣ ಶೇ 6.59 ರಷ್ಟಿದೆ. ಹಕ್ಕಿಪಿಕ್ಕಿ ಸಮುದಾಯದಲ್ಲಿ ಸರಾಸರಿ ಶೈಕ್ಷಣಿಕ ಪ್ರಮಾಣ ಪುರುಷರು 19.23 ರಷ್ಟಿದ್ದರೆ, ಮಹಿಳೆಯರು 10.31 ರಷ್ಟಿದ್ದಾರೆ. ಒಟ್ಟು 14.74 ರಷ್ಟು ಸಾಕ್ಷರರಿದ್ದಾರೆ. ಗೋಸಂಗಿ ಸಮುದಾಯದಲ್ಲಿ ಶೇ 39.59 ರಷ್ಟು ಗಂಡಸರ ಶಿಕ್ಷಣವಿದ್ದರೆ, 36.08 ರಷ್ಟು ಮಹಿಳೆಯರ ಶಿಕ್ಷಣವಿದೆ. ಬಹುಪಾಲು ಅಲೆಮಾರಿ ಸಮುದಾಯಗಳ ಶೈಕ್ಷಣಿಕ ಅಂಕೆಸಂಖ್ಯೆಗಳು ಮೇಲಿನಂತೆಯೇ ಇರುತ್ತದೆ. ಇಲ್ಲಿ ಒಟ್ಟಾರೆ ಅಲೆಮಾರಿ ಸಮುದಾಯದ ಶೈಕ್ಷಣಿಕ ಮಟ್ಟ ತುಂಬಾ ಕೆಳಮಟ್ಟದ್ದಾಗಿದೆ. ಮಹಿಳೆಯರ ಶೈಕ್ಷಣಿಕ ಮಟ್ಟ ಗಣನೀಯ ಪ್ರಮಾಣದಲ್ಲಿ ಕಡಿಮೆ ಇರುವುದು ಕಾಣುತ್ತದೆ.

ಇಂದು ಬಹುಪಾಲು ಅಲೆಮಾರಿ ಬುಡಕಟ್ಟುಗಳ ವಾಸದ ನೆಲೆ ನಗರದ ಅಂಚಿಗೆ ಸುತ್ತುವರಿದಿದೆ. ಅಥವಾ ಅಲೆಮಾರಿ ಸಮುದಾಯಗಳು ಗ್ರಾಮೀಣ ಭಾಗದ ವಲಸೆಯನ್ನು ಕೈಬಿಡುತ್ತಿದ್ದಾರೆ. ಗೋಸಂಗಿ ಸಮುದಾಯದಲ್ಲಿ ನಗರ ಪ್ರದೇಶದ ವಾಸದ ನೆಲೆ ಶೇ 70 ರಷ್ಟಿದ್ದರೆ, ಗ್ರಾಮೀಣ ಪ್ರದೇಶದ ವಾಸದ ನೆಲೆ ಶೇ 30 ರಷ್ಟಿದೆ. ಘಿಸಾಡಿ ಸಮುದಾಯದ ವಾಸದ ನೆಲೆ ಗ್ರಾಮೀಣ ಭಾಗದಲ್ಲಿ ಶೇ 22 ರಷ್ಟಿದ್ದರೆ, ನಗರ ಪ್ರದೇಶದಲ್ಲಿ ಶೇ78 ರಷ್ಟಿದೆ. ಗೋಂಧಳಿ ಸಮುದಾಯದ ವಾಸದ ನೆಲೆ ಗ್ರಾಮೀಣ ಭಾಗದಲ್ಲಿ ಶೇ 19.47 ರಷ್ಟಿದ್ದರೆ, ನಗರ ಪ್ರದೇಶದಲ್ಲಿ ಸರಾಸರಿ ಶೇ.80.53 ರಷ್ಟಿದೆ. ಬೈಲ ಪತ್ತಾರ ಸಮುದಾಯ ನಗರ ಭಾಗದಲ್ಲಿ ಶೇ 51.36 ಇದ್ದರೆ ಗ್ರಾಮೀಣ ಭಾಗದಲ್ಲಿ 49.31 ರಷ್ಟಿದೆ. ದೊಂಬಿದಾಸ ಸಮುದಾಯ ನಗರ ಭಾಗದಲ್ಲಿ ಶೇ 51.36 ಇದ್ದರೆ ಗ್ರಾಮೀಣ ಭಾಗದಲ್ಲಿ 49.31 ರಷ್ಟಿದೆ. ಕಂಜರ ಭಾಟ ಸಮುದಾಯ ಗ್ರಾಮೀಣ ಭಾಗದಲ್ಲಿ 163 ಜನರು ನೆಲೆಸಿದ್ದರೆ, ನಗರ ಭಾಗದಲ್ಲಿ ಒಟ್ಟು 1834 ರಷ್ಟಿದ್ದಾರೆ.

ಹೀಗೆ ಅಲೆಮಾರಿ ಸಮುದಾಯಗಳು ನಗರದ ಅಂಚಿಗೆ ಸರಿದಂತೆ ಇದು ಮಕ್ಕಳ ಶಿಕ್ಷಣದ ಮೇಲೆ ಪ್ರಭಾವ ಬೀರಿದೆಯೇ ಎಂದರೆ ಅದೂ ಇಲ್ಲ. ಬಹುಪಾಲು ನಗರದ ಕಸ ಆಯುತ್ತಿದ್ದಾರೆ ಇಲ್ಲವೆ ಹೋಟೆಲು ಅಂಗಡಿ ಮುಗ್ಗಟ್ಟುಗಳಲ್ಲಿ ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಕರ್ನಾಟಕ ಸರಕಾರ ನಡೆಸುತ್ತಿರುವ ವಸತಿ ಶಾಲೆಗಳಲ್ಲಿ ಅಲೆಮಾರಿ ಮಕ್ಕಳಿಗೆ ವಿಶೇಷ ಪ್ರಾತಿನಿಧ್ಯ ನೀಡಿ, ಈ ನಿಟ್ಟಿನಲ್ಲಿ ಅಲೆಮಾರಿ ಸಮುದಾಯದ ಮಕ್ಕಳನ್ನು ಈ ವಸತಿ ಶಾಲೆಗಳಿಗೆ ಸೇರಿಸುವಂತಹ ಜಾಗೃತಿ ಮೂಡಿಸಿದರೆ ಸ್ವಲ್ಪಮಟ್ಟಿಗಾದರೂ ಬದಲಾವಣೆ ಕಾಣಬಹುದು.

## ಝೀಕಾ ವೈರಸ್, ಭಯ ಬೇಡ ಜಾಗೃತಿ ಇರಲಿ : ರಮೇಶ್ ಬಾಬು



■ ಹಂಪಿ ಟೈಮ್ಸ್ ಬಳ್ಳಾರಿ

ಝೀಕಾ ಎಂಬುದು ವೈರಸ್ ಸೋಂಕು ಆಗಿದ್ದು, ಡೆಂಗಿ, ಚಿಕನ್ ಗುನ್ಯಾ ರೋಗ ಹರಡುವ ಈಡೀಸ್ ಜಾತಿಯ ಸೊಳ್ಳೆಗಳಿಂದಲೂ ಹರಡುತ್ತದೆ. ಹಾಗಾಗಿ ಮನೆಯ ಸುತ್ತಲೂ ನೀರು ನಿಲ್ಲುವ ತ್ಯಾಜ್ಯ ಪರಿಕರಗಳಾದ ತೆಂಗಿನಚಿಪ್ಪು, ಪ್ಲಾಸ್ಟಿಕ್ ಕಪ್, ತಗಡಿನ ಡಬ್ಬ, ಟೈರ್ ಮುಂತಾದವುಗಳನ್ನು ವಿಲೇವಾರಿ ಮಾಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ವಿನಂತಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣ ವಿಭಾಗ ಇವರ ಆಶ್ರಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿಶ್ವ ಸೊಳ್ಳೆ ದಿನದ ಅಂಗವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಆವರಣದಲ್ಲಿ ಪ್ರತಿಜ್ಞಾ ವಿಧಿ ಸ್ವೀಕರಿಸಿ ಅವರು ಮಾತನಾಡಿದರು.

ಬಳಕೆಗಾಗಿ ನೀರು ತುಂಬುವ ಡ್ರಮ್, ಬ್ಯಾರೆಲ್, ಸಿಮೆಂಟ್ ತೊಟ್ಟಿ, ಕಲ್ಲಿನದೋಣಿ ಮುಂತಾದವುಗಳನ್ನು ವಾರಕ್ಕೊಮ್ಮೆ ಸ್ವಚ್ಛಗೊಳಿಸಿ ನೀರು ತುಂಬಿದ ನಂತರ ಸರಿಯಾಗಿ ಮುಚ್ಚಳವನ್ನು ಮುಚ್ಚುವ ಮೂಲಕ ರೋಗ ತಡೆಗೆ ಸಹಕರಿಸಬೇಕು ಎಂದು ಅವರು ಮನವಿ ಮಾಡಿದರು.

ಬ್ರಿಟೀಷ್ ವೈದ್ಯರಾದ ಸರ್.ರೊನಾಲ್ಡ್ ರಾಸ್ ರವರು 1897 ಆಗಸ್ಟ್ 20 ರಂದು ಹೆಣ್ಣು ಅನಾಫಿಲಿಸ್ ಸೊಳ್ಳೆ ಮನುಷ್ಯರಿಗೆ ಮಲೇರಿಯಾ ಹರಡುತ್ತದೆ ಎಂಬುದನ್ನು ಕಂಡುಹಿಡಿದರು. ನಂತರ ಸೊಳ್ಳೆ ಕಚ್ಚುವಿಕೆಯಿಂದ ಹರಡುವ ಮಲೇರಿಯಾ, ಮೆದುಳು ಜ್ವರ, ಆನೆಕಾಲು ರೋಗ, ಡೆಂಗ್ಯೂ, ಚಿಕನ್ ಗುನ್ಯಾ >>4

## ಕೀಟ, ರೋಗ ಬಾಧೆ ಕಂಡಲ್ಲಿ ಸೂಕ್ತ ನಿರ್ವಹಣಾ ಕ್ರಮ ಕೈಗೊಳ್ಳಿ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಪ್ರಸ್ತುತ ಹಂತದಲ್ಲಿ ಪ್ರಮುಖ ಬೆಳೆಗಳಾದ ಮೆಕ್ಕೆಜೋಳ ಮತ್ತು ತೊಗರಿ ಬೆಳೆಗಳಿಗೆ ಕೀಟ ಮತ್ತು ರೋಗ ಬಾಧೆಗಳು ಕಂಡುಬರುವ ಸಾಧ್ಯತೆ ಇದ್ದು, ಸೂಕ್ತ ನಿರ್ವಹಣಾ ಕ್ರಮಗಳನ್ನು ಅನುಸರಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಡಾ.ಕೆ.ಸೋಮಸುಂದರ್ ಅವರು ತಿಳಿಸಿದ್ದಾರೆ.

ಮೆಕ್ಕೆಜೋಳ ಬೆಳೆಯು ಸುಮಾರು 50–60 ದಿನದ ಬೆಳೆಯಾಗಿದ್ದು, ಫಾಲ್ ಸೈನಿಕ ಹುಳು ಕಂಡುಬರುವ ಸಾಧ್ಯತೆ ಇದೆ. ಇದು ಪ್ರಾರಂಭಿಕ ಹಂತದಲ್ಲಿ ಎಲೆಯ ಮೇಲೆ ಬಿಳಿ ಮಚ್ಚೆಗಳು ಕಂಡುಬರುತ್ತವೆ. ನಂತರ ಉದ್ದವಾದ ರಂಧ್ರಗಳು, ಹಿಕ್ಕೆಯಿಂದ ಕೂಡಿದ ಹರಿದ ಎಲೆಗಳು ಕಾಣುತ್ತವೆ.

**ಹತೋಟಿ ಕ್ರಮಗಳು:** ದೊಡ್ಡ ಹಂತದ ಮರಿಹುಳುಗಳು ಕಂಡುಬಂದರೆ ಕೈಯಿಂದ ಆರಿಸಿ ನಾಶಪಡಿಸಬಹುದು. ಜೈವಿಕ ಶೀಲೀಂದ್ರ ಕೀಟನಾಶಕಗಳಾದ ನೊಮೊರಿಯಾ ರಿಲೈ ಅಥವಾ ಮೆಟಾರೈಜಿಯಮ್ ಅನಿಸೋಪ್ಲಿಯೆ ಯನ್ನು 2 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬಹುದು. ಹೊಲದಲ್ಲಿ ದೀಪಾಕರ್ಷಕ ಬಲೆಗಳನ್ನು ಅಲ್ಲಲ್ಲಿ ಅಳವಡಿಸಿ ಪತಂಗಗಳನ್ನು ಆಕರ್ಷಿಸಿ ನಾಶಪಡಿಸಬಹುದು. ರಸಾಯನಿಕ ಕೀಟನಾಶಕ ಗಳಾದ ಇಮಾಮೆಕ್ಟಿನ್ ಬೆಂಜೋಯೇಟ್ 5 ಎಸ್.ಜಿ @ 0.4 ಗ್ರಾಂ ನಷ್ಟು ಪ್ರತಿ ಲೀ. ನೀರಿಗೆ ಅಥವಾ ಕ್ಲೋರಾಂಟ್ರನಿಲಿಪ್ರೋಲ್ 18.5 ಎಸ್.ಸಿ @ 0.4 ಮಿ.ಲೀ ನಷ್ಟು ಪ್ರತಿ ಲೀ. ನೀರಿಗೆ ಅಥವಾ ಥಯೋಡಿಕಾರ್ಬ್ 75 ಡಬ್ಲ್ಯೂಪಿ @ 1 ಗ್ರಾಂ ನಷ್ಟು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬಹುದು.

**ತೊಗರಿ ಬೆಳೆ:** ತೊಗರಿ ಬೆಳೆಯು ಸುಮಾರು 50–60 ದಿನಗಳೊಳಗಾಗಿ ಬರುವ ಬೆಳೆಯಾಗಿದ್ದು, ಬಿತ್ತನೆಯಾದ 45–60 ದಿನಗಳ ಬೆಳೆಯ ಕುಡಿಯನ್ನು ಚಿವುಟುವು ದರಿಂದ ಅಧಿಕ ಇಳುವರಿಯನ್ನು ಪಡೆಯಬಹುದಾಗಿದೆ.

ಈ ಬೆಳೆಗೆ ಸೊರಗು ರೋಗ ಕಂಡುಬರುತ್ತದೆ. ಬಿತ್ತನೆಯಾದ 45–60 ದಿನಗಳಲ್ಲಿ ಸಸಿಗಳು ಬಾಡುತ್ತವೆ. ಹೂ ಬಿಡುವ ಹಂತದಲ್ಲಿ ಗಿಡಗಳು ಗುಂಪು ಗುಂಪಾಗಿ ಒಣಗುತ್ತವೆ ಇದು ಹಾನಿಯ ಲಕ್ಷಣವಾಗಿದೆ.

**ಹತೋಟಿ ಕ್ರಮಗಳು:** ನೀರನ್ನು ಬಸಿಗಾಲುವೆ ಮುಖಾಂತರ ಹೊರ ಹಾಕಬೇಕು. ಬಾಧಿತ ಸಸಿಗಳನ್ನು ಕಿತ್ತುಹಾಕಿ ಸುಡುವುದು. ಕಾರ್ಬಂಡೆಜಿಂ ಶೇ 12 ಮತ್ತು ಮ್ಯಾಂಕೋಜೆಬ್ ಶೇ. 63 ರೋಗನಾಶಕವನ್ನು 3 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಬಾಧಿತ ಗಿಡದ ಬುಡಕ್ಕೆ ನೀಡಬೇಕು. ಈ ರೀತಿಯಾಗಿ ಮೆಕ್ಕೆಜೋಳ ಮತ್ತು ತೊಗರಿ ಬೆಳೆಗಳಿಗೆ ಕೀಟ ಮತ್ತು ರೋಗ ಬಾಧೆಗಳು ಕಂಡುಬಂದಲ್ಲಿ ಸೂಕ್ತ ನಿರ್ವಹಣಾ ಕ್ರಮಗಳನ್ನು ಅನುಸರಿಸಬೇಕು ಎಂದು ತಿಳಿಸಿದ್ದಾರೆ.

ಕವಿ ಮನಸು

## ಮತಿಯಲಿ ಹುರುಪಿರಲಿ



ಶತಕದ ಪರಿಧಿಯ ಮಿತಿಯನು ನೆನೆಯದೆ
ಮತಿಯಲಿ ಯೌವನ ಹುರುಪಿನಲಿ
ಸತಿಯನು ನಗಿಸುತ ಪತಿಯವ ನಿಂತಿಹ
ಚ್ಯುತಿಯನು ತಾರದೆ ಒಲವಿನಲಿ

ಹಿಂದಿನ ಬದುಕಿನ ಸುಂದರ ಕ್ಷಣಗಳ
ಚಂದವ ಬಣ್ಣಿಸಿ ಪತಿರಾಯ
ಬಂಧದ ಖುಷಿಯನು ಹೊಂದುತ
ಮಡದಿಯು
ಕುಂದದೆ ಬೀರಲು ನಸುನಗೆಯ

ಗಂಡನ ನುಡಿಗಳ ಹೆಂಡತಿ ಆಲಿಸಿ
ತಂದಿರೆ ಲಜ್ಜೆಯ ಮನದಲ್ಲಿ
ಚಂದದ ಒಲವಿನ ನಂದದ ಬೆಳಕಲಿ
ಕಂಡಿತು ಕೆಂಪದು ಮೊಗದಲ್ಲಿ

ಬಳಗವು ಸನಿಹಕೆ ಸುಳಿಯದೆ ಹೋದರು
ಕಳೆದಿರೆ ನೋವಿನ ದಿನದಲ್ಲಿ
ಗೆಲುವನು ತಂದಿದೆ ಬಳುವಳಿ ನೀಡಿದೆ
ಗೆಳೆತನ ಸತಿ ಪತಿ ನಡುವಲ್ಲಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಜೀವನ ಕನ್ನಡಿ

ಜೀವನ ಒಂದು ಕನ್ನಡಿಯಂತೆ
ತೋರುವುದು ನಾವಿರುವಂತೆ
ಮಾಡಿದರೆ ನಾವುಗಳು ಚಿಂತೆ
ಚಿಂತೆಯು ಅದಕೇಕೆ ಅಂತೆ

ಬದುಕಿನೊಳು ಏರು ಪೇರುಗಳಂತೆ
ಮಾರುಕಟ್ಟೆಯ ಷೇರುಗಳಂತೆ
ಆಸೆಗಳು ಮನುಜಗೆ ಸಹಜವಂತೆ
ಸರಳತೆ ಬಾಳಿಗೆ ಇಲ್ಲ ಚಿಂತೆ

ಅಂಗೈ ಕನ್ನಡಿಗಿಂತ ಅಂತರಂಗ
ಕನ್ನಡಿ ನೋಡು
ಅಂತರ್ಧಾನಿಯಾಗಿ ಒಳಗೆ ಹೋಗಿ
ಬದುಕಿನಲ್ಲಿ ಸಾಗಿ ಹೋಗು

ನಾಲಿಗೆ ಒಳ್ಳೇಯದು ಇದ್ರೆ
ನಾಡೆಲ್ಲಾ ಒಳ್ಳೆಯದಂತೆ
ಈ ನಿಜವಾ ಅರಿಯದೆ ಇದ್ರೆ
ಬಾಳೆಲ್ಲ ನರಕವಂತೆ

ಆಕಾಶ ಮೇಲಿರುವುದು ಸಹಜ
ಭೂದೇವಿ ಕೆಳಗಿರುವುದು ಸಹಜ
ಎರಡರ ನಡುವೆ ಇರುವ ಮನುಜ
ಆಸೆಗಳ ಬಿಟ್ಟು ಬದುಕೋ ಸಹಜ

– ಕೆ ಎಂ ಬಸವರಾಜ ಹೊಸಪೇಟೆ

## ಹೆಣ್ಣು

ಹೆಣ್ಣು ಮುಗ್ಧ ಮನಸ್ಸಿನವಳು
ತಾಳ್ಮೆ ಸಹನೆ ಉಳ್ಳವಳು
ಹಾಗಂತ ಭೋಗದ ವಸ್ತು ಅವಳಲ್ಲಾ

ಅವಳು ಪವಿತ್ರವಾದವಳು
ಪೂಜಿಸದಿದ್ದರೂ ಪರವಾಗಿಲ್ಲ
ಗೌರವಿಸಿ ಅವಳನ್ನ

ಸಂಸಾರಕ್ಕೆ ಕಣ್ಣಾಗುವವಳು
ಮನೆಯನ್ನ ಬೆಳಗುವವಳು
ಸ್ವತಂತ್ರವಾಗಿ ಬದುಕಲು
ಬಿಡಿ ಅವಳನ್ನ......

ಹೆಣ್ಣು ಯಾರ ಆಸ್ತಿಯಲ್ಲಾ
ಯಾರ ದಾಹದ ಆಹಾರವಲ್ಲಾ
ಅವಳು ನಿಮ್ಮ ಹಾಗೆಯೇ
ಒಂದು ಜೀವನೇ ತಾನೇ.

– ರೇಷ್ಮಾ ಶೆಟ್ಟಿ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**23–08–2024 – ಶುಕ್ರವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ರೇವತಿ |
| ಯೋಗ | : ಶೂಲ |
| ಕರಣ | : ಬಾಳವ |
| ಸೂರ್ಯೋದಯ | : 06:07:19 |
| ಸೂರ್ಯಾಸ್ತ | : 18:51:14 |
| ರಾಹು ಕಾಲ | : 10:54–12:29 |
| ಯಮಘಂಡ ಕಾಲ | : 15:40–17:16 |
| ಗುಳಿಕ ಕಾಲ | : 07:43–09:18 |

## ತುಂಗಭದ್ರಾ ನೀರಿನ ಮಟ್ಟ



**ಗುರುವಾರ : 22–08–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1626.31 ಅಡಿ |
| ಒಳ ಹರಿವು | 33443 ಕ್ಯುಸೆಕ್ |
| ಹೊರ ಹರಿವು | 9413 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 80.857 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1627.06 ಅಡಿ |
| ಒಳ ಹರಿವು | 1085 ಕ್ಯುಸೆಕ್ |
| ಹೊರ ಹರಿವು | 10325 ಕ್ಯುಸೆಕ್ |
| ಸಾಮರ್ಥ್ಯ | 83.425 ಟಿಎಂಸಿ |

# ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ ಎ, ಬಿ ವೃಂದದ ಹುದ್ದೆಗಳ ಪರೀಕ್ಷೆ

## ಆಗಸ್ಟ್ 27ರಂದು ಪರೀಕ್ಷೆ । ಪೂರ್ವ ಸಿದ್ಧತೆಗೆ ಡಿಸಿ ಎಂ.ಎಸ್.ದಿವಾಕರ ಸೂಚನೆ


■ **ಹಂಪಿ ಟೈಮ್ಸ್ ಹೊಸಪೇಟೆ**

2023–24ನೇ ಸಾಲಿನ ಆಗಸ್ಟ್ 27ರಂದು ನಿಗದಿಯಾದ ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ ಎ ಮತ್ತು ಬಿ ವೃಂದಗಳ ಹುದ್ದೆಗಳ ಪೂರ್ವಭಾವಿ ಪರೀಕ್ಷಾ ಸಿದ್ಧತೆಯ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರ ಅಧ್ಯಕ್ಷತೆಯಲ್ಲಿ ಆಗಸ್ಟ್ 22ರಂದು ಪೂರ್ವಭಾವಿ ಸಿದ್ಧತಾ ಸಭೆ ನಡೆಯಿತು.

ಜಿಲ್ಲಾ ಪಂಚಾಯತ್ ಸಿಇಓ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ಹೊಸಪೇಟೆ ಸಹಾಯಕ ಆಯುಕ್ತರು, ಹೊಸಪೇಟೆ ತಹಸೀಲ್ದಾರರು, ಖಜಾನೆ ಇಲಾಖೆಯ ಉಪ ನಿರ್ದೇಶಕರು ಸೇರಿದಂತೆ ಪರೀಕ್ಷೆಗೆ ನಿಯೋಜನೆಯಾದ ವಿವಿಧ ಅಧಿಕಾರಿಗಳೊಂದಿಗೆ ತಮ್ಮ ಕಚೇರಿಯಲ್ಲಿ ಗೂಗಲ್ ಮೀಟ್ ನಡೆಸಿ ಮಾತನಾಡಿದ ಜಿಲ್ಲಾಧಿಕಾರಿಗಳು, ಅಂದು ಜಿಲ್ಲೆಯಲ್ಲಿ ಪರೀಕ್ಷೆಗಳು ಸುಗಮವಾಗಿ ಮತ್ತು ಸುವ್ಯಸ್ಥಿತವಾಗಿ ನಡೆಸಲು ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಆಗಸ್ಟ್ 27ರಂದು ಎಲ್ಲಾ 13 ಪರೀಕ್ಷಾ ಕೇಂದ್ರಗಳ ಸುತ್ತಲು 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ಆದೇಶಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಲಿನ ಝುರಾಕ್ಸ್ ಮತ್ತು ಕಂಪ್ಯೂಟರ್ ಅಂಗಡಿಗಳನ್ನು ಮುಚ್ಚಲು ಆದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಆಗಸ್ಟ್ 27ರಂದು ಪತ್ರಿಕೆ–1 ಬೆಳಗ್ಗೆ 10 ರಿಂದ ಮಧ್ಯಾಹ್ನ 12 ಗಂಟೆವರೆಗೆ ಮತ್ತು ಪತ್ರಿಕೆ 2 ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆವರೆಗೆ ನಡೆಯಲಿರುವ 2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ ಎ ಮತ್ತು ಬಿ ವೃಂದದ ಹುದ್ದೆಗಳ ಪೂರ್ವಭಾವಿ ಪರೀಕ್ಷಾ ಗೌಪ್ಯ ಸಾಮಗ್ರಿಗಳ ಬಂಡೆಲಗಳನ್ನು ಸ್ವೀಕರಿಸಿ ಜಿಲ್ಲಾ ಖಜಾನೆಯ ಭದ್ರತಾ ಕೊಠಡಿಯಲ್ಲಿ ಅಭಿರಕ್ಷಿಸುವ ಮತ್ತು ಪರೀಕ್ಷಾ ದಿನಗಳಂದು ಮಾರ್ಗಾಧಿಕಾರಿಗಳಿಗೆ ವಿತರಿಸುವ ಸಂಬಂಧ ಜಿಲ್ಲಾ ಹಂತದಲ್ಲಿ ಜಿಲ್ಲಾಧಿಕಾರಿಗಳ ಪ್ರತಿನಿಧಿ, ಜಿಲ್ಲಾ ಖಜನಾಧಿಕಾರಿ ಮತ್ತು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರನ್ನೊಳಗೊಂಡ ತ್ರಿಸದಸ್ಯ ಸಮಿತಿಯನ್ನು ಈಗಾಗಲೇ ರಚಿಸಲಾಗಿದ್ದು, ನೇಮಕಗೊಂಡ ಸಮಿತಿ ಸದಸ್ಯರು ಮೊಹರು ಮಾಡಿರುವ ಪರೀಕ್ಷಾ ಗೌಪ್ಯ ಸಾಮಗ್ರಿಗಳ ಬಾಕ್ಸಗಳನ್ನು ಪರೀಕ್ಷಾ ದಿನಗಳಂದು ನಿಗದಿತ ಸಮಯಕ್ಕೆ ಜಿಲ್ಲಾ ಖಜಾನೆಯಿಂದ ನಿಯಮಾನುಸಾರ ಜಿಲ್ಲಾ ಮಾರ್ಗಾಧಿಕಾರಿಗಳ ಸುಪರ್ದಿಗೆ ವಹಿಸಿ ದೃಢೀಕರಣ ಪಡೆಯಬೇಕು. ಪರೀಕ್ಷಾ ಪ್ರಾರಂಭವಾಗುವ ಅವಧಿಗಿಂತ ಮುಂಚಿತವಾಗಿ ಪರೀಕ್ಷಾ ಗೌಪ್ಯ ಸಾಮಗ್ರಿಗಳ ಬಂಡಲಗಳನ್ನು ಪರೀಕ್ಷಾ ಕೇಂದ್ರಕ್ಕೆ ತಲುಪಿಸುವಂತೆ ಜಾಗೃತಿ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.



> ಪರೀಕ್ಷಾ ಹಿನ್ನೆಲೆಯಲ್ಲಿ ಒಟ್ಟು 13 ಜನ ಅಧಿಕಾರಿಗಳನ್ನು ಪರೀಕ್ಷಾ ಕೇಂದ್ರಗಳಿಗೆ ಮಾರ್ಗಾಧಿಕಾರಿಗಳನ್ನಾಗಿ ನೇಮಿಸಲಾಗಿದ್ದು, ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆ ಬಾಕ್ಸ್‌ಗಳನ್ನು ವಿತರಿಸಲು ನಿಯಮಾನುಸಾರ ಕ್ರಮ ವಹಿಸಬೇಕು.
> – **ಎಂ.ಎಸ್.ದಿವಾಕರ** ಜಿಲ್ಲಾಧಿಕಾರಿ
> ವಿಜಯನಗರ ಜಿಲ್ಲೆ

ವಿಜಯನಗರ ಜಿಲ್ಲೆಯಲ್ಲಿ 13 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಈ ಪರೀಕ್ಷೆಯು ಸುಗಮವಾಗಿ ನಡೆಯುವ ನಿಟ್ಟಿನಲ್ಲಿ ಪ್ರತಿ 4 ಪರೀಕ್ಷಾ ಕೇಂದ್ರಕ್ಕೆ ಒಬ್ಬ ಪರೀಕ್ಷಾ ಕೇಂದ್ರದ ವೀಕ್ಷಕರನ್ನಾಗಿ ನೇಮಿಸಿ ಆದೇಶಿಸಲಾಗಿದೆ. ಇವರು ಪರೀಕ್ಷಾ ವೇಳಾಪಟ್ಟಿಯಂತೆ ತಮಗೆ ನಿಯೋಜಿಸಿದ ಕೇಂದ್ರದಲ್ಲಿ ಪರೀಕ್ಷಾ ಪೂರ್ವ ಸಿದ್ಧತೆಯನ್ನು ಮಾಡಿಕೊಂಡಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಮೂಲಭೂತ ಸೌಕರ್ಯಗಳಾದ ಆಸನ, ಕುಡಿಯುವ ನೀರು, ಗಾಳಿ ಬೆಳಕಿನ ವ್ಯವಸ್ಥೆಯ ಇತ್ಯಾದಿ ಒದಗಿಸುವ ಬಗ್ಗೆ ಪರಿಶೀಲಿಸಬೇಕು. ಪರೀಕ್ಷೆಯಲ್ಲಿ ಏನಾದರು ಅಹಿತಕರ ಘಟನೆಗಳು ಸಂಭವಿಸಿದರೆ ಅದರ ವಿವರವನ್ನು ನೀಡಬೇಕು ಎಂದು ಸೂಚನೆ ನೀಡಿದರು. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬ ಸ್ಥಳೀಯ ನಿರೀಕ್ಷಣಾಧಿಕಾರಿಯನ್ನು ನೇಮಿಸಲಾಗಿದೆ. ಈ ಅಧಿಕಾರಿಗಳು ಪರೀಕ್ಷಾ ವೇಳಾಪಟ್ಟಿಯಂತೆ ತಮಗೆ ನಿಯೋಜಿಸಿದ ಕೇಂದ್ರದಲ್ಲಿ ಪರೀಕ್ಷಾ ಪೂರ್ವ ಸಿದ್ಧತೆಯನ್ನು ಮಾಡಿಕೊಂಡಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ತ್ರಿಸದಸ್ಯ ಸಮಿತಿಯ ಅಧಿಕಾರಿಗಳು, ಪರೀಕ್ಷಾ ಕೇಂದ್ರಗ ವೀಕ್ಷಕರು ಸೇರಿದಂತೆ ಇನ್ನೀತರ ಅಧಿಕಾರಿಗಳು ಇದ್ದರು.

# ಕುಂದು ಕೊರತೆ ಸಭೆ



■ **ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನ ಕೆ.ಅಯ್ಯನಹಳ್ಳಿ ಗ್ರಾಮದ ಸಮುದಾಯ ಭವನದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಯ್ ಮಹಮ್ಮದ್ ಆಲಿ ಅಕ್ರಮ್ ಶಾ ಅವರ ನೇತೃತ್ವದಲ್ಲಿ ಬುಧವಾರ ಗ್ರಾಪಂ ಸಾರ್ವಜನಿಕ ಕುಂದ ಕೊರತೆ ಸಭೆ ನಡೆಸಿ, ಕೆಲ ಸಮಸ್ಯೆಗಳಿಗೆ ತತಕ್ಷಣದಲ್ಲಿಯೇ ಇತ್ಯರ್ಥ ಪಡಿಸಿದರು.

ಕುಡಿಯುವ ನೀರು, ಸ್ವಚ್ಚತೆಯ ಬಗ್ಗೆ, ಇ–ಸ್ವತ್ತು, ವಸತಿಗೆ ಬೇಡಿಕೆ, ರಸ್ತೆ, ಚರಂಡಿ, ವಿವಿಧ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಸಾರ್ವಜನಿಕರಿಂದ 22 ಅರ್ಜಿಗಳ ಅಹವಾಲು ಸ್ವೀಕರಿಸಿದರು. ಈ ವೇಳೆ ಅಹವಾಲು ಸ್ವೀಕರಿಸಿದ ಅರ್ಜಿಗಳಿಗೆ ಸಂಬಂಧಿಸಿದ ತಾಲೂಕು ಮಟ್ಟದ ಇಲಾಖೆಯ ಅಧಿಕಾರಿಗಳ ಸಮಕ್ಷಮದಲ್ಲಿ ತಕ್ಷಣವೇ ಕ್ರಮ ವಹಿಸುವಂತೆ ಶೀಘ್ರ ಬಗೆಹರಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಭೀಮಪ್ಪ ಲಾಳಿ ಉಪ ಕಾರ್ಯದರ್ಶಿಗಳು ಜಿ,ಪಂ ವಿಜಯನಗರ, ಜಿ.ಪರಮೇಶ್ವರ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು ಎಚ್.ವಿಜಯಕುಮಾರ್, ಪಿಡಿಓ ರಾಘವೇಂದ್ರ ಅಣಜಿ, ಗ್ರಾಪಂ, ತಾಪಂ ಸದಸ್ಯರು, ಅಧಿಕಾರಿಗಳು ಹಾಜರಿದ್ದರು.

# ಅನುದಾನ ಬಿಡುಗಡೆಗೆ ಸಿಎಂ ಸೂಚನೆ

**ಮೊದಲ ಪುಟದಿಂದ**

ಪ್ರಕರಣದ ತನಿಖೆ ಮುಂದುವರೆದಿದ್ದು ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆ ಆಗಿರುವ ಸುಮಾರು 30 ಕೋಟಿಯಷ್ಟು ಹಣವನ್ನು ವಾಪಾಸ್ ವಶಕ್ಕೆ ಪಡೆಯುವ ಪ್ರಯತ್ನ ಮುಂದುವರೆದಿದೆ. ಸದ್ಯದಲ್ಲೇ ಪೂರ್ತಿ ಹಣವನ್ನು ವಾಪಾಸ್ ವಶಕ್ಕೆ ಪಡೆಯುವ ಸಾಧ್ಯತೆಗಳಿವೆ. ಅಲ್ಲಿಯವರೆಗೂ ವಾಲ್ಮೀಕಿ ಸಮುದಾಯದ ಅಭಿವೃದ್ಧಿ ಕೆಲಸಗಳಿಗೆ ತೊಂದರೆ ಆಗಬಾರದು ಎನ್ನುವ ಉದ್ದೇಶದಿಂದ ನಿಗಮಕ್ಕೆ ತಕ್ಷಣವೇ ಹೆಚ್ಚುವರಿ ಅನುದಾನ ಬಿಡುಗಡೆಗೆ ಸೂಚನೆ ನೀಡಿದರು. ಪ್ರಕರಣ ಪೂರ್ತಿ ಇತ್ಯರ್ಥ ಆಗುವವರೆಗೂ ನಿಗಮದ ಮತ್ತು ಸಮುದಾಯದ ಕೆಲಸಗಳಿಗೆ ತೊಂದರೆ ಆಗಬಾರದು ಎನ್ನುವುದು ನಮ್ಮ ಆಧ್ಯತೆಯಾಗಿದೆ. ಹೀಗಾಗಿ ಹಣ ಬಿಡುಗಡೆ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಮುಖ್ಯಮಂತ್ರಿಗಳು ನಿಯೋಗಕ್ಕೆ ಸ್ಪಷ್ಟಪಡಿಸಿದರು. ಶಾಸಕರಾದ ಕಂಪ್ಲಿ ಗಣೇಶ್, ರಘುಮೂರ್ತಿ, ಕೋನರೆಡ್ಡಿ, ಸಮುದಾಯದ ಮುಖಂಡರಾದ ನಿವೃತ್ತ KAS ಅಧಿಕಾರಿ ಮೃತ್ಯುಂಜಯಪ್ಪ ಸೇರಿ ಸಮಾಜದ ಹಲವು ಹಿರಿಯರು ಉಪಸ್ಥಿತರಿದ್ದರು.

# ಅಹವಾಲುಗಳಿದ್ದರೆ ಖುದ್ದು ಕಚೇರಿಗೆ ಭೇಟಿ ನೀಡಿ

## ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಹೇಳಿಕೆ । ಅಭಿವೃದ್ಧಿಗೆ ಆದ್ಯತೆ ಪ್ರತಿ ವಾರ್ಡುಗಳಲ್ಲಿ ವಾರ್ಡ್ ಸಭೆ । ಸಮಸ್ಯೆಗಳಿಗೆ ಅಲ್ಲೇ ಪರಿಹಾರ

■ **ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದ ಸರ್ವತೋಮುಖ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುವೆ ಎಂದು ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಹೇಳಿದರು. ಪಟ್ಟಣದ ಪಪಂ ಕಚೇರಿಯಲ್ಲಿ ಗುರುವಾರ ಅಧಿಕಾರ ಸ್ವೀಕಾರ ಮಾಡಿ ಮಾತನಾಡಿದರು. ಪಟ್ಟಣದ ಇಪ್ಪತ್ತು ವಾರ್ಡುಗಳಲ್ಲಿ ಬೇಕಾಗಿರುವ ಸೌಲಭ್ಯಗಳನ್ನು ಪಟ್ಟಿಮಾಡಿ ಹಂತ ಹಂತವಾಗಿ ಬಗೆಹರಿಸಲು ಮುಂದಾಗುತ್ತೇನೆ. ಈಗಾಗಲೇ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಅವರು ಸುಂದರ ಹಾಗೂ ಸ್ವಚ್ಚ ಪಟ್ಟಣ ನಿರ್ಮಾಣಕ್ಕೆ ಹಲವು ಕಾರ್ಯ ಯೋಜನೆಗಳನ್ನು ತಯಾರಿಸಿದ್ದು, ಅದರ ಮೂಲಕ ಪಪಂ ವ್ಯಾಪ್ತಿಯ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಅಭಿವೃದ್ಧಿಗೆ ಮುಂದಾಗುತ್ತೇವೆ. ಪಟ್ಟಣದ ಜನರಿಗೆ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ವಸತಿ, ಬೀದಿ ದೀಪ, ರಸ್ತೆ,ಚರಂಡಿ ವ್ಯವಸ್ಥೆ ಸೇರಿದಂತೆ ಸುಂದರ ಹಾಗೂ ಸ್ವಚ್ಚ ಪಟ್ಟಣಕ್ಕೆ ಮೊದಲ ಆದ್ಯತೆ ನೀಡುತ್ತೇನೆ. ಸಾರ್ವಜನಿಕರ ದೂರಿನಂತೆ ಪಪಂ ಕಚೇರಿಯಲ್ಲಿ ಹಕ್ಕುಪತ್ರ ಸೇರಿದಂತೆ ಇತರೆ ದಾಖಲೆಗಳನ್ನು ನೀಡಲು



ವೃಥಾ ಅಲೆದಾಡಿಸುತ್ತಾರೆ ಎನ್ನುವ ಕೆಲ ದೂರುಗಳು ಬಂದಿದ್ದು, ಮುಖ್ಯಾಧಿಕಾರಿ ಸೇರಿದಂತೆ ಸಿಬ್ಬಂದಿಗಳು ಹಾಗೂ ಉಪಾಧ್ಯಕ್ಷೆ, ಸರ್ವ ಸದಸ್ಯರ ಸಮನ್ವಯದಿಂದ ಸಾರ್ವಜನಿಕರ ಸಮಸ್ಯೆ ಗಳನ್ನು ಸೂಕ್ತವಾಗಿ ಬಗೆಹರಿಸಿ, ಜನರ ನಿರೀಕ್ಷೆಗಳನ್ನು ಹುಸಿಯಾಗದಂತೆ ಕಾರ್ಯ ನಿರ್ವಹಿಸುವುದಾಗಿ ತಿಳಿಸಿದರು. ಶಾಸಕರು ಈಗಾಗಲೇ ಪಟ್ಟಣದ ಅಂಬೇಡ್ಕರ್ ನಗರದಲ್ಲಿ ಸಿಸಿ ರಸ್ತೆ ನಿರ್ಮಾಣಕ್ಕೆ ಅಂದಾಜು 3 ಕೋಟಿ ಅನುದಾನ ನೀಡಿ ಕಾಮಗಾರಿಗೆ ಚಾಲನೆ ನೀಡಿದ್ದು, ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು. ಸಾರ್ವಜನಿಕರ ಅಹವಾಲುಗಳು ಏನೇ ಇದ್ದರು ಖುದ್ದು ಕಚೇರಿಗೆ ಬಂದು ಭೇಟಿ ಮಾಡಿದರೆ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗುವುದಾಗಿ ಭರವಸೆ ನೀಡಿದರು. ಸಂಸದ ಈ.ತುಕಾರಾಂ ಅವರು ಪಟ್ಟಣದ ಸಂಡೂರು ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿ ಮಾಡಲು ಕಾರ್ಯ ಯೋಜನೆ ರೂಪಿಸಲು ತಿಳಿಸಿದ್ದು, ಶೀಘ್ರದಲ್ಲೇ ರಸ್ತೆ ಅಗಲಿ ಕರಣ ಮಾಡಿ, ಅಭಿವೃದ್ಧಿಗೊಳಿಸಲಾಗುವುದು. ಪ್ರತಿ ವಾರ್ಡುಗಳಲ್ಲಿ ವಾರ್ಡ್ ಸಭೆಗಳನ್ನು ಮಾಡಿ ಅಲ್ಲಿನ ಸಮಸ್ಯೆಗಳನ್ನು ಆಲಿಸಿ, ಸಮಸ್ಯೆಗಳನ್ನು ಬಗೆಹರಿಸುವುದಾಗಿ ತಿಳಿಸಿದರು.

ಪಪಂ ಉಪಾಧ್ಯಕ್ಷೆ ಲೀಲಾವತಿ ಪ್ರಭಾಕರ, ಸದಸ್ಯ ಸಯ್ಯದ್ ಶುಕೂರ್, ಮುಖ್ಯಾಧಿಕಾರಿ ಎಂ.ಕೆ.ಮುಗುಳಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಗುರುಸಿದ್ದನ ಗೌಡ, ವಾಲ್ಮೀಕಿ ಮಹಾ ಸಭಾದ ತಾಲೂಕು ಅಧ್ಯಕ್ಷ ಸುರೇಶ್, ಸದಸ್ಯರಾದ ಬಾಸೂ ನಾಯ್ಕ್, ಕೆ.ಈಶಪ್ಪ, ಡಿ.ಎಚ್.ದುರುಗೇಶ್, ನಲ್ಲಮುತ್ತಿ ದುರುಗೇಶ್, ಕೊತ್ಲೇಶ್, ಉದಯ ಜನ್ನು, ಥಾಣಿ ರಾಘವೇಂದ್ರ, ಸಣ್ಣ ಕೊತ್ಲಪ್ಪ, ಸಿ.ಬಿ.ಜಯರಾಂ ನಾಯಕ, ವೆಂಕಟೇಶ್, ಬೇಕರಿ ಮಹೇಶ್, ಸಿ.ಬಿ.ಸಿದ್ದೇಶ್, ಕುಮಾರ ಸ್ವಾಮಿ, ಎನ್.ಗಂಗಾಧರ ಸೇರಿದಂತೆ ಅನೇಕರು ಇದ್ದರು.

# ಝೀಕಾ ವೈರಸ್, ಭಯ ಬೇಡ ಜಾಗೃತಿ ಇರಲಿ

**ಮೂರನೆ ಪುಟದಿಂದ**

ಮತ್ತು ಇತ್ತೀಚಿಗೆ ಕಂಡು ಬರುತ್ತಿರುವ ಝೀಕಾ ವೈರಸ್ ಕುರಿತಂತೆ ವ್ಯಾಪಕವಾಗಿ ಜಾಗೃತಿ ನೀಡಲು ಕ್ರಮವಹಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಆರ್.ಅಬ್ದುಲ್ಲಾ ಅವರು ಮಾತನಾಡಿ ಝೀಕಾ ವೈರಸ್ ಈಡೀಸ್ ಸೊಳ್ಳೆಗಳ ಕಚ್ಚುವಿಕೆಯಿಂದ ಹರಡುವ ಕಾಯಿಲೆಯಾಗಿದ್ದು, ಈಡೀಸ್ ಸೊಳ್ಳೆಗಳು ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ಕಚ್ಚುತ್ತವೆ ಎಂದು ತಿಳಿಸಿದರು.

ಜಿಲ್ಲೆಯ ನಾಗರಿಕರು ಝೀಕಾ ವೈರಸ್ ಪ್ರಕರಣ ವರದಿಯಾದ ಪ್ರದೇಶಕ್ಕೆ ಪ್ರವಾಸ ಹೋಗಿಬಂದಲ್ಲಿ ಅಥವಾ ಆ ಪ್ರದೇಶದಿಂದ ತಮ್ಮ ಮನೆಗಳಿಗೆ ಬಂಧು–ಬಳಗ ಬಂದಲ್ಲಿ ಅವರಲ್ಲಿ ಯಾರಿಗಾದರೂ ಝೀಕಾ ವೈರಸ್ ಲಕ್ಷಣಗಳಾದ ಜ್ವರ, ಕಣ್ಣು ಕೆಂಪಾಗುವಿಕೆ, ತಲೆನೋವು, ಗಂಧೆಗಳು, ಕೀಲುಗಳಲ್ಲಿ ನೋವು, ಸ್ನಾಯುಗಳಲ್ಲಿ ನೋವು ಕಂಡುಬಂದಲ್ಲಿ ತಕ್ಷಣವೇ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಬೇಕು ಎಂದು ಹೇಳಿದರು.

**ಅನುಸರಿಸಬೇಕಾದ ಕ್ರಮ:** ರೋಗ ಲಕ್ಷಣಗಳು ಸೌಮ್ಯ ಹಾಗೂ ಸಾಧಾರಣ ಸ್ವರೂಪವಾಗಿದ್ದು, 2–7 ದಿನಗಳವರೆಗೆ ಇರುತ್ತದೆ. ಈ ಲಕ್ಷಣ ಹೊಂದಿದವರು ಹತ್ತಿರದ ಆರೋಗ್ಯ ಸಂಸ್ಥೆಗೆ ಭೇಟಿ ನೀಡಿ ಅಗತ್ಯ ಚಿಕಿತ್ಸೆ ಪಡೆದುಕೊಳ್ಳಬೇಕು. ಸೋಂಕಿಗೆ ನಿರ್ದಿಷ್ಟ ಚಿಕಿತ್ಸೆ ಇಲ್ಲದಿರುವುದರಿಂದ ರೋಗ ಲಕ್ಷಣಗಳಿಗನುಗುಣವಾಗಿ ನಿರ್ವಹಣೆ ಮಾಡಲಾಗುವುದು.

ನಿರ್ಜಲೀಕರಣ ತಪ್ಪಿಸಲು ದ್ರವರೂಪದ ಆಹಾರವನ್ನು ಹೆಚ್ಚಿಗೆ ಸೇವಿಸಬೇಕು ಹಾಗೂ ಅಗತ್ಯ ವಿಶ್ರಾಂತಿ ಪಡೆಯಬೇಕು. ಶಂಕಿತ, ದೃಢ ಝೀಕಾ ವೈರಸ್ ಸೋಂಕಿತರು ಪ್ರತ್ಯೇಕವಾಗಿದ್ದು, ಮಲಗುವಾಗ ಅಥವಾ ವಿಶ್ರಾಂತಿ ಪಡೆಯುವಾಗ ಸೊಳ್ಳೆ ಪರದೆ ಬಳಸಬೇಕು. ಈಡೀಸ್ ಸೊಳ್ಳೆ ಕಡಿತದಿಂದ ಪಾರಾಗಲು ಸ್ವಯಂ ರಕ್ಷಣಾ ವಿಧಾನಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು.

ಮುಖ್ಯವಾಗಿ ಗರ್ಭಿಣಿಯರು ಅತ್ಯಂತ ಎಚ್ಚರವಹಿಸಬೇಕು. ಗರ್ಭಾವಸ್ಥೆಯಲ್ಲಿ ಝೀಕಾ ಸೋಂಕು ಕಾಣಿಸಿಕೊಂಡಲ್ಲಿ ಜನಿಸುವ ಶಿಶುವಿನ ತಲೆಯ ಗಾತ್ರದಲ್ಲಿ ಕಡಿಮೆ ಬೆಳವಣಿಗೆ ದೋಷ (ಮೈಕ್ರೋ ಸೆಫಾಲಿ) ಕಂಡು ಬರಬಹುದು. ಈ ಹಿನ್ನಲೆಯಲ್ಲಿ ಪ್ರತಿ ಶುಕ್ರವಾರ ಇಲಾಖೆಯಿಂದ ಕೈಗೊಳ್ಳುವ ಸೊಳ್ಳೆ ನಿರ್ಮೂಲನಾ ಕಾರ್ಯಕ್ಕೆ ಸಾರ್ವಜನಿಕರು ಸಹಕರಿಸಲು ವಿನಂತಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿ ಡಾ.ಇಂದ್ರಾಣಿ, ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ.ವೀರೇಂದ್ರ ಕುಮಾರ್, ಮನೋರೋಗ ತಜ್ಞ ಡಾ. ರೋಹನ್ ವನಗುಂದಿ, ಜಿಲ್ಲಾ ಕೀಟಶಾಸ್ತ್ರಜ್ಞರಾದ ನಂದಾ ಕಡಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಕಾಯಕಲ್ಪ ವ್ಯವಸ್ಥಾಪಕರಾದ ಡಾ. ಸುರೇಶ್ ಕುಮಾರ್, ಎನ್‌ವಿಬಿಡಿಸಿಪಿ ಕನ್ಸಲ್ಟಂಟ್ ಪ್ರತಾಪ್, ಆರೋಗ್ಯ ಮೇಲ್ವಿಚಾರಣಾ ಅಧಿಕಾರಿ ವಿರುಪಾಕ್ಷಿ ಸೇರಿದಂತೆ ಎನ್‌ವಿಬಿಡಿಸಿಪಿ ಹಾಗೂ ವಿವಿಧ ವಿಭಾಗಗಳ ಸಿಬ್ಬಂದಿಯವರು ಉಪಸ್ಥಿತರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

(ಮುಂದುವರಿದ ಭಾಗ... ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು)

**14). ಲೋಹದ ಆಕ್ಸೈಡ್ ಗಳನ್ನು ಪ್ರತ್ಯಾಮ್ಲೀಯ ಆಕ್ಸೈಡ್ ಗಳೆಂದು, ಅಲೋಹದ ಆಕ್ಸೈಡ್ ಗಳನ್ನು ಆಮ್ಲಿಯ ಆಕ್ಸೈಡ್ ಗಳು ಎಂದು ಕರೆಯುತ್ತಾರೆ. ಏಕೆ?**

ಉತ್ತರ : ಲೋಹದ ಆಕ್ಸೈಡ್ ಗಳು ಆಮ್ಲ ದೊಂದಿಗೆ ವರ್ತಿಸಿ ಲವಣ ಮತ್ತು ನೀರನ್ನು ಉಂಟುಮಾಡುತ್ತವೆ. ಈ ಕ್ರಿಯೆಯು ಪ್ರತ್ಯಾಮ್ಲದೊಂದಿಗೆ ಆಮ್ಲದ ಕ್ರಿಯೆಯಂತೆ ಇರುವುದರಿಂದ ಲೋಹದ ಆಕ್ಸೈಡ್ ಗಳನ್ನು ಪ್ರತ್ಯಾಮ್ಲೀಯ ಆಕ್ಸೈಡ್ ಗಳು ಎನ್ನುತ್ತಾರೆ.

ಅಲೋಹದ ಆಕ್ಸೈಡ್ ಗಳು ಪ್ರತ್ಯಾಮ್ಲದೊಂದಿಗೆ ವರ್ತಿಸಿ ಲವಣ ಮತ್ತು ನೀರನ್ನು ಉಂಟು ಮಾಡುತ್ತವೆ. ಇದು ಪ್ರತ್ಯಾಮ್ಲ ಮತ್ತು ಆಮ್ಲಗಳ ನಡುವಿನ ಕ್ರಿಯೆಯಂತೆಯೇ ಇರುವುದರಿಂದ ಅಲೋಹದ ಆಕ್ಸೈಡ್ ಗಳನ್ನು ಆಮ್ಲೀಯ ಆಕ್ಸೈಡ್ ಗಳು ಎನ್ನುತ್ತಾರೆ.

**15). ಆಮ್ಲ ಮತ್ತು ಪ್ರತ್ಯಾಮ್ಲಗಳ ನಡುವಿನ ಸಾಮಾನ್ಯ ಗುಣಗಳೇನು?**

ಉತ್ತರ : 1.ಆಮ್ಲ ಮತ್ತು ಪ್ರತ್ಯಾಮ್ಲಗಳು ನೀರಿನಲ್ಲಿ ವಿಲೀನವಾದಾಗ ಅಯಾನುಗಳಾಗಿ ಬೇರ್ಪಡುತ್ತವೆ.
2. ಏಕಮಾನ ಗಾತ್ರದಲ್ಲಿರುವ $H^+$ ಮತ್ತು $H_3O^+$ / $OH^-$ ಅಯಾನುಗಳ ಸಾರತೆಯು ಕಡಿಮೆಯಾಗುತ್ತದೆ.
3. ನೀರಿನಲ್ಲಿ ವಿಲೀನಗೊಳಿಸುವ ಪ್ರಕ್ರಿಯೆ ಬಹಿರುಷ್ಣಕ ಕ್ರಿಯೆ ಯಾಗಿದೆ.

**16). ಕ್ಲೋರೋ ಆಲ್ಕಲಿ ಪ್ರಕ್ರಿಯೆಯ 3 ಉತ್ಪನ್ನಗಳನ್ನು ಹೆಸರಿಸಿ, ಪ್ರತಿಯೊಂದರ ಉಪಯೋಗಗಳನ್ನು ಬರೆಯಿರಿ.**

ಉತ್ತರ: ಕ್ಲೋರ್ ಆಲ್ಕಲಿ ಪ್ರಕ್ರಿಯೆಯ 3 ಉತ್ಪನ್ನಗಳು– 1. ಹೈಡ್ರೋಜನ್ 2. ಕ್ಲೋರಿನ್ 3. ಸೋಡಿಯಂ ಹೈಡ್ರಾಕ್ಸೈಡ್ ಒಳಗೊಂಡಿರುವ ಬ್ರೈನ್.

ಹೈಡ್ರೋಜನ್ ಉಪಯೋಗಗಳು:– ಇಂಧನವಾಗಿ, ಕೃತಕ ಬೆಣ್ಣೆ ತಯಾರಿಕೆಯಲ್ಲಿ , ರಸಗೊಬ್ಬರಗಳಿಗೆ ಅಮೋನಿಯ ತಯಾರಿಕೆಯಲ್ಲಿ,

ಕ್ಲೋರಿನ್‌ನ ಉಪಯೋಗಗಳು:– ನೀರಿನ ಶುದ್ಧೀಕರಣದಲ್ಲಿ, ಈಜುಕೊಳಗಳ ಸ್ವಚ್ಛಕಾರಕವಾಗಿ, ಸೋಂಕುನಾಶಕವಾಗಿ ಮತ್ತು ಕೀಟನಾಶಕವಾಗಿ,

ಸೋಡಿಯಂ ಹೈಡ್ರಾಕ್ಸೈಡ್ ಒಳಗೊಂಡಿರುವ ಬ್ರೈನ್ ಉಪಯೋಗಗಳು:– ಲೋಹಗಳ ಜಿಡ್ಡು ನಿವಾರಣೆ, ಸಾಬೂನು ಮತ್ತು ಮಾರ್ಜಕಗಳು, ಕಾಗದ ತಯಾರಿಕೆ, ಕೃತಕ ನೂರುಗಳ ತಯಾರಿಕೆ.

**17). ಈ ಕೆಳಗಿನ ಸಂಯುಕ್ತಗಳ (ಲವಣಗಳ) ಅಣು ಸೂತ್ರ, ರಾಸಾಯನಿಕ ಹೆಸರುಗಳನ್ನು ಬರೆದು ಪ್ರತಿಯೊಂದರ ಉಪಯೋಗಗಳನ್ನು ತಿಳಿಸಿ.**
ಅ) ಚಲುವೆ ಪುಡಿ / ಬ್ಲೀಚಿಂಗ್ ಪುಡಿ ಆ) ಪ್ಲಾಸ್ಟರ್ ಆಫ್ ಪ್ಯಾರಿಸ್
ಇ). ವಾಷಿಂಗ್ ಸೋಡಾ

ಉತ್ತರ: ಅ). ಚಲುವೆ ಪುಡಿ / ಬ್ಲೀಚಿಂಗ್ ಪುಡಿ :

ಅಣು ಸೂತ್ರ – $CaOCl_2$ ಕ್ಯಾಲ್ಸಿಯಂ ಆಕ್ಸಿ ಕ್ಲೋರೈಡ್

ಉಪಯೋಗಗಳು:– ಬಟ್ಟೆ ಕಾರ್ಖಾನೆಯಲ್ಲಿ, ಹತ್ತಿ ಮತ್ತು ನಾರಿಗೆ ಬಿಳುಪು ನೀಡಲು, ಕಾಗದ ಕಾರ್ಖಾನೆಯಲ್ಲಿ ಮರದ ತಿರುಳಿಗೆ ಬಿಳುಪು ನೀಡಲು, ಲಾಂಡ್ರಿಯಲ್ಲಿ ತೊಳೆದ ಬಟ್ಟೆಗೆ ಬಿಳುಪ ನೀಡಲು, ಅನೇಕ ರಾಸಾಯನಿಕ ಕಾರ್ಖಾನೆಗಳಲ್ಲಿ ಉತ್ಕರ್ಷಣಕಾರಿ ಆಗಿ, ಕುಡಿಯುವ ನೀರನ್ನು ಕ್ರಿಮಿ ಮುಕ್ತಗೊಳಿಸಲು ಉಪಯೋಗಿಸುತ್ತಾರೆ.

ಆ). ಪ್ಲಾಸ್ಟರ್ ಆಫ್ ಪ್ಯಾರಿಸ್ :

ಅಣು ಸೂತ್ರ – $CaSO_4.\frac{1}{2}H_2O$ - ಕ್ಯಾಲ್ಸಿಯಂ ಸಲ್ಫೈಟ್ ಹೆಮಿ ಹೈಡ್ರೇಟ್


ಉಪಯೋಗಗಳು:– ಪ್ಲಾಸ್ಟರ್ ಆಫ್ ಪ್ಯಾರಿಸ್ ಅನ್ನು ಮುರಿದ ಮೂಳೆಗಳಿಗೆ ಸರಿಯಾದ ಸ್ಥಳದಲ್ಲಿ ಆಧಾರ ನೀಡಲು, ಆಟಿಕೆಗಳ ತಯಾರಿಕೆ, ಅಲಂಕಾರಿಕ ವಸ್ತುಗಳಲ್ಲಿ ಮತ್ತು ನುಣುಪಾದ ಮೇಲ್ಮೈ ನಿರ್ಮಿಸಲು ಉಪಯೋಗಿಸುತ್ತಾರೆ.

ಇ). ವಾಷಿಂಗ್ ಸೋಡಾ :

ಅಣು ಸೂತ್ರ – $Na_2CO_3 . 10H_2O$ - ಸೋಡಿಯಂ ಕಾರ್ಬೋನೇಟ್

ಉಪಯೋಗಗಳು:– ವಾಷಿಂಗ್ ಸೋಡಾ ವನ್ನು ನೀರಿನ ಶಾಶ್ವತ ಗಡಸುತನವನ್ನು ನಿವಾರಿಸಲು, ಗಾಜು, ಸಾಬೂನು ಮತ್ತು ಕಾಗದ ಕಾರ್ಖಾನೆಗಳಲ್ಲಿ, ಬೋರಾಕ್ಸ್ ನಂತಹ ಸೋಡಿಯಂ ಸಂಯುಕ್ತಗಳ ಉತ್ಪಾದನೆಯಲ್ಲಿ, ಗೃಹಬಳಕೆಯ ಸ್ವಚ್ಛಕಾರಿಯಾಗಿ ಉಪಯೋಗಿಸುತ್ತಾರೆ.

**18). ನೀರಿನಲ್ಲಿ ಆಮ್ಲೀಯ ದ್ರಾವಣ ವಿದ್ಯುತ್‌ಅನ್ನು ಪ್ರವಹಿಸುತ್ತಿರುವುದು ತೋರಿಸುವ ಉಪಕರಣದ ಜೋಡಣೆಯ ಅಂದವಾದ ಚಿತ್ರವನ್ನು ಬರೆದು ಎಲ್ಲ ಭಾಗಗಳನ್ನು ಗುರುತಿಸಿ?**




**19).ಅ).ಲೋಹದ ಕಾರ್ಬೋನೇಟ್‌ನೊಂದಿಗೆ ಆಮ್ಲವು ವರ್ತಿಸಿದಾಗ ಬಿಡುಗಡೆಯಾಗುವ ಅನಿಲ ಯಾವುದು? ಅದನ್ನು ಸುಣ್ಣದ ತಿಳಿ ನೀರಿನ ಮೂಲಕ ಹಾಯಿಸಿದಾಗ ಉಂಟಾಗುವ ರಾಸಾಯನಿಕ ಕ್ರಿಯೆಯ ಸಮೀಕರಣವನ್ನು ಬರೆಯಿರಿ. ಈ ಕ್ರಿಯೆಯಲ್ಲಿ ದೊರೆಯುವ ಪ್ರಕ್ಷೇಪದ ಬಣ್ಣ ಯಾವುದು?** JUNE 2019

ಉತ್ತರ: ಬಿಡುಗಡೆಯಾಗುವ ಅನಿಲ: ಇಂಗಾಲದ ಡೈ ಆಕ್ಸೈಡ್

ಸಮೀಕರಣ : $Ca(OH)_2 (aq) + CO_2 (g) \rightarrow CaCO_3 (s) + H_2O(l)$

ದೊರೆಯುವ ಪ್ರಕ್ಷೇಪದ ಬಣ್ಣ : ಬಿಳಿ.

**ಆ). ಶುಷ್ಕ ಅರಳಿದ ಸುಣ್ಣದೊಂದಿಗೆ ಕ್ಲೋರಿನ್ ವರ್ತಿಸಿದಾಗ ದೊರೆಯುವ ಉತ್ಪನ್ನ ಯಾವುದು ? ಅದರ ಸಮೀಕರಣ ಬರೆಯಿರಿ.**

ಉತ್ತರ : ಶುಷ್ಕ ಅರಳಿದ ಸುಣ್ಣದೊಂದಿಗೆ ಕ್ಲೋರಿನ್ ವರ್ತಿಸಿದಾಗ ದೊರೆಯುವ ಉತ್ಪನ್ನ – ಚೆಲುವೆ ಪುಡಿ.

ಸಮೀಕರಣ : $Ca (OH)_2 + Cl_2 \rightarrow CaOCl_2 + H_2O$

**20). ದೈನಂದಿನ ಜೀವನದಲ್ಲಿ pH ಮೌಲ್ಯದ ಪ್ರಾಮುಖ್ಯತೆಯನ್ನು ತಿಳಿಸಿ**

ಉತ್ತರ : 1. ಸಸ್ಯ ಮತ್ತು ಪ್ರಾಣಿಗಳು 7.0 ಇಂದ 7.8 pH ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತವೆ.
2. ಮಳೆ ನೀರಿನ pH ಮೌಲ್ಯ 5.6 ಕ್ಕಿಂತ ಕಡಿಮೆಯಾದಾಗ ಅದನ್ನು ಆಮ್ಲ ಮಳೆ ಎನ್ನುತ್ತಾರೆ.
3. ಸಸ್ಯಗಳ ಆರೋಗ್ಯಕರ ಬೆಳವಣಿಗೆಗೆ ನಿರ್ದಿಷ್ಟ pH ವ್ಯಾಪ್ತಿಯ ಅಗತ್ಯವಿದೆ.
4. ಜೀರ್ಣಕ್ರಿಯೆಯಲ್ಲಿ pH ಪ್ರಮಾಣ ಅತಿ ಕಡಿಮೆಯಾದರೆ ಆಮ್ಲೀಯತೆ ಅಥವಾ ಅಸಿಡಿಟಿ ಉಂಟಾಗುತ್ತದೆ.
5. pH ಪ್ರಮಾಣ 5.6 ಕ್ಕಿಂತ ಕಡಿಮೆಯಾದಾಗ ಹಲ್ಲಿನ ಸವೆತ ಉಂಟಾಗುತ್ತದೆ.

**21). ಆಮ್ಲಗಳ ಗುಣಗಳನ್ನು ಪಟ್ಟಿ ಮಾಡಿ**

ಉತ್ತರ : 1. ಹುಳಿ ರುಚಿಯನ್ನು ಹೊಂದಿವೆ
2. pH ಮೌಲ್ಯ 7 ಕ್ಕಿಂತ ಕಡಿಮೆ
3. ನೀಲಿ ಲಿಟ್ಮಸ್ ನ್ನು ಕೆಂಪು ಬಣ್ಣಕ್ಕೆ ಬದಲಾಯಿಸುತ್ತವೆ.
4. $H^+$ ಮತ್ತು $H_3O^+$ ಅಯಾನುಗಳನ್ನು ಒಳಗೊಂಡಿವೆ

**22). ಪ್ರತ್ಯಾಮ್ಲದ ಗುಣಗಳನ್ನು ಪಟ್ಟಿ ಮಾಡಿ**

ಉತ್ತರ : 1. ಕಹಿ ರುಚಿಯನ್ನು ಹೊಂದಿವೆ.
2. pH ಮೌಲ್ಯ 7 ಕ್ಕಿಂತ ಹೆಚ್ಚು.
3. ಕೆಂಪು ಲಿಟ್ಮಸ್ ನ್ನು ನೀಲಿ ಬಣ್ಣಕ್ಕೆ ಬದಲಾಯಿಸುತ್ತವೆ.
4. $OH^-$ ಅಯಾನ್ ಅನ್ನು ಒಳಗೊಂಡಿದೆ.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

**ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055